ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ನವೆಂಬರ್ 19, 2020

ಸಂಪುಟ : 47 ಸಂಚಿಕೆ : 199 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com

## ಜಿಲ್ಲೆಯಲ್ಲಿ 'ಗ್ರಾಮ ಒನ್' ಕಾರ್ಯಕ್ರಮಕ್ಕೆ ಇಂದು ಚಾಲನೆ

ದಾವಣಗೆರೆ, ನ. 18 - ಕರ್ನಾಟಕ ಒನ್, ದಾವಣಗೆರೆ ಒನ್ ಮಾದರಿಯಲ್ಲಿ ಹಲವಾರು ಸೇವೆಗಳನ್ನು ಒಂದೇ ಸೂರಿನಡಿ ಒದಗಿಸುವ ಯೋಜನೆ ಈಗ 'ಗ್ರಾಮ ಒನ್' ಮೂಲಕ ಗ್ರಾಮಗಳಿಗೂ ತಲುಪಲಿದೆ. ಜಿಲ್ಲೆಯ 101 ಗ್ರಾಮಗಳಲ್ಲಿ ಪ್ರಾಯೋಗಿಕವಾಗಿ ಈ ಯೋಜನೆ ಜಾರಿಗೆ ಬರಲಿದೆ.

ನಾಳೆ ಗುರುವಾರ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಯೋಜನೆಗೆ ವರ್ಚುಯಲ್ ಚಾಲನೆ ನೀಡಲಿದ್ದಾರೆ. ಈ ಸಂಬಂಧ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರು ನಗರ ಸಮೀಪದ ಮಾಗಾನಹಳ್ಳಿಯಲ್ಲಿ ಆಯೋಜಿಸಲಾಗಿರುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

**101 ಗ್ರಾಮಗಳಿಗೆ ಒಂದೇ ಸೂರಿನಲ್ಲಿ 750 ಸೇವೆಗಳು**

ಉದ್ಘಾಟನಾ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಉಸ್ತುವಾರಿ ಸಚಿವ ಭೈರತಿ ಬಸವರಾಜು, ಸಂಸದ ಜಿ.ಎಂ.ಸಿದ್ದೇಶ್ವರ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ. ಪಿ. ರೇಣುಕಾಚಾರ್ಯ, ಸಾಬೂನು ಮತ್ತು ಮಾರ್ಜಕ ನಿಯಮಿತದ ಅಧ್ಯಕ್ಷ ಕೆ. ಮಾಡಾಳ್ ವಿರೂಪಾಕ್ಷಪ್ಪ, ವಾಲ್ಮೀಕಿ ನಿಗಮದ ಅಧ್ಯಕ್ಷ ಎಸ್.ವಿ. ರಾಮಚಂದ್ರ, ಶಾಸಕರಾದ ಶಾಮನೂರು ಶಿವಶಂಕರಪ್ಪ, ಪ್ರೊ. ಎನ್. ಲಿಂಗಣ್ಣ, ಎಸ್. ರಾಮಪ್ಪ, ಜಿ.ಪಂ. ಅಧ್ಯಕ್ಷೆ ದೀಪಾ ಜಗದೀಶ್ ಮತ್ತಿತರರು ಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಶಾಸಕ ಎಸ್.ಎ. ರವೀಂದ್ರನಾಥ್ ವಹಿಸಿಕೊಳ್ಳಲಿದ್ದಾರೆ.

5000ಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ಗ್ರಾಮಗಳಲ್ಲಿ ಗ್ರಾಮ ಒನ್‌ಗಳು ಸ್ಥಾಪನೆಯಾಗುತ್ತಿವೆ. ಗ್ರಾಮ-ಒನ್ ಕೇಂದ್ರಗಳು ಸರ್ಕಾರದ ವಿವಿಧ (2ನೇ ಪುಟಕ್ಕೆ)

# ಪರಿಶಿಷ್ಟ ಜಾತಿ ಮೀಸಲಾತಿ ಹೆಚ್ಚಳಕ್ಕೆ ಉಪಸಮಿತಿ

## ಬಳ್ಳಾರಿ ವಿಭಜನೆ, 31ನೇ ಜಿಲ್ಲೆಯಾಗಿ ವಿಜಯನಗರ ರಚನೆ

ಬೆಂಗಳೂರು, ನ. 18 - ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಮೀಸಲಾತಿ ಹೆಚ್ಚಳ ಮಾಡುವ ಸಂಬಂಧ ಸಚಿವ ಸಂಪುಟದ ಉಪಸಮಿತಿ ರಚನೆಗೆ ಸರ್ಕಾರ ನಿರ್ಧರಿಸಿದೆ.

ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಸಮಾಜ ಕಲ್ಯಾಣ ಸಚಿವ ಶ್ರೀರಾಮುಲು, ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ ಈ ವಿಷಯ ತಿಳಿಸಿದ್ದಲ್ಲದೆ, ಒಂದು ವಾರದಲ್ಲಿ ಸಮಿತಿ ರಚನೆಯಾಗಲಿದ್ದು, ಸಮಿತಿಯಲ್ಲಿ ಯಾರಿರಬೇಕು ಎಂಬುದರ ಬಗ್ಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ಹೇಳಿದ್ದಾರೆ.

ಪರಿಶಿಷ್ಟ ಜಾತಿ ಹಾಗೂ ವರ್ಗದವರಿಗೆ ಮೀಸಲಾತಿ ಹೆಚ್ಚಳ ಮಾಡಬೇಕೆಂಬುದು ಬಹುದಿನಗಳ ಬೇಡಿಕೆಯಾಗಿತ್ತು. ಇದಕ್ಕೆ ಸರ್ಕಾರ ಸ್ಪಂದಿಸಿದ್ದು, ನ್ಯಾಯಮೂರ್ತಿ ನಾಗ ಮೋಹನದಾಸ್ ಸಮಿತಿಯ ವರದಿ ಅನ್ವಯ ಉಪಸಮಿತಿ ತೀರ್ಮಾನ ಕೈಗೊಳ್ಳಲಿದೆ.

ಪರಿಶಿಷ್ಟ ಜಾತಿಗೆ ಶೇ. 13 ರಿಂದ 15ಕ್ಕೆ, ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ. 5 ರಿಂದ 7ಕ್ಕೆ ಮೀಸಲು ಹೆಚ್ಚಳ ಮಾಡುವ ಬೇಡಿಕೆ ಇತ್ತು. ಕೆಲವು ಗೊಂದಲಗಳು ಇದ್ದ ಕಾರಣ ಮೀಸಲಾತಿ ಹೆಚ್ಚಳ ಮಾಡುವ ಸಂಬಂಧ ಉಪಸಮಿತಿ ರಚನೆ ಮಾಡಿ, ಸಮಿತಿ ನೀಡುವ ತೀರ್ಮಾನವನ್ನು ಮುಂದೆ ಸರ್ಕಾರ ಅನುಷ್ಠಾನಗೊಳಿಸುವ ಬಗ್ಗೆ ನಿರ್ಧಾರ ಮಾಡಲಿದೆ ಎಂದು ಮಾಧುಸ್ವಾಮಿ ಹೇಳಿದ್ದಾರೆ.

ಬಳ್ಳಾರಿ ಜಿಲ್ಲೆಯನ್ನು ವಿಭಜಿಸಿ, ಹೊಸಪೇಟೆ ಸೇರಿದಂತೆ ಕೆಲವು ತಾಲ್ಲೂಕುಗಳನ್ನೂ ಒಳಗೊಂಡಂತೆ ವಿಜಯನಗರ ಜಿಲ್ಲೆ ನಿರ್ಮಾಣಕ್ಕೆ ಸಂಪುಟ ಅಸ್ತು ನೀಡಿದೆ.

ಹೊಸ ಜಿಲ್ಲೆಗೆ ಯಾವ ತಾಲ್ಲೂಕುಗಳು ಮತ್ತು ಪಂಚಾಯಿತಿಗಳನ್ನು ಸೇರಿಸಬೇಕು, ಅದರ ವ್ಯಾಪ್ತಿ ಮತ್ತು ವಿಸ್ತೀರ್ಣ ಎಷ್ಟಿರಬೇಕೆಂಬುದರ ಬಗ್ಗೆ ಮುಂದಿನ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗುವುದು.

ನಂತರ ಬಳ್ಳಾರಿ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು ಒಮ್ಮತದಿಂದ ವಿಜಯನಗರ ಜಿಲ್ಲಾ ಸ್ಥಾಪನೆಗೆ ಸಮ್ಮತಿಸಿದ್ದಾರೆ ಎಂದು ರಾಮುಲು ಇದೇ (2ನೇ ಪುಟಕ್ಕೆ)

## ಬಳ್ಳಾರಿ ವಿಭಜನೆಗೆ ಪರ-ವಿರೋಧದ ದನಿ

**ಬೆಂಗಳೂರು, ಜ. 18 - ವಿಜಯನಗರ ಹೊಸ ಜಿಲ್ಲೆ ರಚನೆಗೆ ರಾಜ್ಯ ಸಂಪುಟ ಒಪ್ಪಿಗೆ ನೀಡಿದ ಬೆನ್ನಲ್ಲೇ ಪರ ಹಾಗೂ ವಿರೋಧದ ದನಿಗಳು ವ್ಯಕ್ತವಾಗುತ್ತಿವೆ.**

**ಬಳ್ಳಾರಿ ಪಶ್ಚಿಮ ಭಾಗದ ತಾಲೂಕುಗಳನ್ನೊಳಗೊಂಡ ಈ ನೂತನ ಜಿಲ್ಲೆ ರಚನೆ ಮಾಡಬೇಕೆಂಬ ದೀರ್ಘಕಾಲದ ಬೇಡಿಕೆ ಈಡೇರಿದೆ. ಇದು ಐತಿಹಾಸಿಕ ತೀರ್ಮಾನ ಎಂದು ಅರಣ್ಯ ಸಚಿವ ಆನಂದ್ ಸಿಂಗ್ ಹೇಳಿದ್ದಾರೆ.**

**ಮತ್ತೊಂದೆಡೆ ಸರ್ಕಾರ ಕ್ರಮಕ್ಕೆ ಬಳ್ಳಾರಿ ಶಾಸಕ ಸೋಮಶೇಖರ್ ರೆಡ್ಡಿ ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.**

**ವಿಜಯನಗರ ಜಿಲ್ಲೆ ರಚನೆಗೆ ನನ್ನ ಬೆಂಬಲ ವಿಲ್ಲ. ರಾಜ್ಯ ಸರ್ಕಾರ ಇಂತಹ ನಿರ್ಣಯ ಕೈಗೊಳ್ಳಬಾರದಿತ್ತು. ಈ ಜಿಲ್ಲೆಯ ಜನರು, ವಿಜಯನಗರ ಜಿಲ್ಲೆ ರಚನೆಯ ವಿರೋಧಿಸಿ ಹೋರಾಟ ಮಾಡಿದರೆ** (2ನೇ ಪುಟಕ್ಕೆ)

## ಡಿ.7ರಿಂದ ಚಳಿಗಾಲದ ವಿಧಾನ ಮಂಡಲ ಅಧಿವೇಶನ

ಬೆಂಗಳೂರು, ನ. 18 - ವಿಧಾನಮಂಡಲದ ಚಳಿಗಾಲದ ಅಧಿವೇಶನವನ್ನು ಡಿಸೆಂಬರ್ 7 ರಿಂದ 15 ರವರೆಗೆ ನಡೆಸಲು ರಾಜ್ಯ ಸಚಿವ ಸಂಪುಟ ತೀರ್ಮಾನಿಸಿದೆ.

ರಾಜ್ಯದಲ್ಲಿ ಇತ್ತೀಚೆಗೆ ಬಿದ್ದ ಭಾರೀ ಮಳೆ ಮತ್ತು ನೆರೆಯಿಂದ ಹಾನಿಗೊಳಗಾದ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಒಂದು ಸಾವಿರ ಕೋಟಿ ರೂ.ಗಳನ್ನು ಬಿಡುಗಡೆ ಮಾಡಲು ಸಂಪುಟ ಸಭೆಯಲ್ಲಿ ಸಮ್ಮತಿಸಲಾಗಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಮಾಧುಸ್ವಾಮಿ, ಕೊರೊನಾ ಸಾಂಕ್ರಾಮಿಕ ರೋಗದ ನಡುವೆಯೂ ನಿಗದಿತ ಸಮಯದಲ್ಲಿ ಅಧಿವೇಶನ ನಡೆಸಬೇಕೆಂಬ ಉದ್ದೇಶದಿಂದ ಏಳು ದಿನಗಳ ಕಾಲ ಸದನ ನಡೆಸುವ ತೀರ್ಮಾನ ಕೈಗೊಂಡಿದ್ದೇವೆ ಎಂದು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಕೆಲವು ಪ್ರಮುಖ ಮಸೂದೆಗಳಿಗೆ ಅಂಗೀಕಾರ ಪಡೆದುಕೊಳ್ಳಲಾಗುವುದು. ಸದನ ನಡೆಸುವ ಸಂಬಂಧ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಉಭಯ ಸದನಗಳ ಪೀಠಾಸೀನಾಧಿಕಾರಿಗಳು ತೆಗೆದುಕೊಳ್ಳುವ ತೀರ್ಮಾನಕ್ಕೆ ಸರ್ಕಾರ ಬದ್ಧವಾಗಿರುತ್ತದೆ ಎಂದು ಸಚಿವರು ತಿಳಿಸಿದ್ದಾರೆ.

ಭಾರೀ ಮಳೆ ಮತ್ತು ನೆರೆಯಿಂದ ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ ಮತ್ತು ಮಲೆನಾಡು ಪ್ರದೇಶದಲ್ಲಿ (2ನೇ ಪುಟಕ್ಕೆ)

## ಬ್ರಿಟನ್: ಪೆಟ್ರೋಲ್, ಡೀಸೆಲ್ ಕಾರು ನಿಷೇಧ

**ಹಸಿರು ಕೈಗಾರಿಕಾ ಕ್ರಾಂತಿಗೆ ನಿರ್ಧಾರ**

ಲಂಡನ್, ನ. 18 - ಬ್ರಿಟನ್‌ನಲ್ಲಿ ಹಸಿರು ಕೈಗಾರಿಕಾ ಕ್ರಾಂತಿಗೆ ದಾರಿ ಮಾಡುವ ಯೋಜನೆಯನ್ನು ಅನಾವರಣಗೊಳಿಸಿರುವ ಪ್ರಧಾನ ಮಂತ್ರಿ ಬೋರಿಸ್ ಜಾನ್ಸನ್, 2030ರಿಂದ ಹೊಸ ಪೆಟ್ರೋಲ್ ಮತ್ತು ಡೀಸೆಲ್ ಕಾರುಗಳ ಮಾರಾಟದ ಮೇಲೆ ನಿಷೇಧ ಹೇರುವುದಾಗಿ ತಿಳಿಸಿದ್ದಾರೆ.

ಹತ್ತು ಅಂಶಗಳ ಹಸಿರು ಯೋಜನೆಗಾಗಿ ಸರ್ಕಾರ 12 ಶತಕೋಟಿ ಡಾಲರ್‌ಗಳನ್ನು ಸಂಗ್ರಹಿಸಿದೆ. ಈ ಮೂಲಕ 2.5 ಲಕ್ಷ ಜನರು ಉದ್ಯೋಗ ಪಡೆದುಕೊಳ್ಳಲಿದ್ದಾರೆ ಎಂದು ಸರ್ಕಾರ ತಿಳಿಸಿದೆ. ಡಿಸೆಂಬರ್ 12ರಂದು ಬ್ರಿಟನ್‌ನಲ್ಲಿ ಪರಿಸರ ಮಹತ್ವಾಕಾಂಕ್ಷೆ ಶೃಂಗಸಭೆ (2ನೇ ಪುಟಕ್ಕೆ)

## ಅಕ್ರಮ ಆಸ್ತಿ ಪ್ರಕರಣ : 10 ಕೋಟಿ ರೂ. ದಂಡ ಪಾವತಿಸಿದ ಶಶಿಕಲಾ



ಚೆನ್ನೈ, ನ. 18 – ಅಕ್ರಮ ಆಸ್ತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಜೆ. ಜಯಲಲಿತಾ ನಿಕಟವರ್ತಿ ವಿ.ಕೆ. ಶಶಿಕಲಾ ಅವರಿಗೆ ವಿಧಿಸಲಾಗಿದ್ದ 10 ಕೋಟಿ ರೂ.ಗಳ ದಂಡವನ್ನು ಬೆಂಗಳೂರು ನ್ಯಾಯಾಲಯದಲ್ಲಿ ಜಮಾ ಮಾಡಲಾಗಿದ್ದು, ಅವರು ಶೀಘ್ರದಲ್ಲೇ ಬಿಡುಗಡೆಯಾಗುವ ನಿರೀಕ್ಷೆ ಇದೆ ಎಂದು ಶಶಿಕಲಾ ಪರ ವಕೀಲರು ತಿಳಿಸಿದ್ದಾರೆ.

ಆದರೆ, ಶಶಿಕಲಾ (3ನೇ ಪುಟಕ್ಕೆ)

## ಎರಡು ಹಂತಗಳಲ್ಲಿ ಗ್ರಾ.ಪಂ. ಚುನಾವಣೆ

ಬೆಂಗಳೂರು,ನ.18- ಗ್ರಾಮ ಪಂಚಾಯ್ತಿ ಸಾರ್ವತ್ರಿಕ ಚುನಾವಣೆಯನ್ನು ಎರಡು ಹಂತಗಳಲ್ಲಿ ನಡೆಸಲು ರಾಜ್ಯ ಚುನಾವಣಾ ಆಯೋಗ ಉದ್ದೇಶಿಸಿದ್ದು, ಈ ಸಂಬಂಧ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳೊಂದಿಗೆ ನಿನ್ನೆ ವೀಡಿಯೋ ಸಂವಾದ ನಡೆಸಿ, ಅಭಿಪ್ರಾಯಗಳನ್ನು ಸಂಗ್ರಹಿಸಿದೆ.

## ಅಂತಿಮ ಪದವಿ ವಿದ್ಯಾರ್ಥಿಗಳಿಗೆ ಮಾತ್ರ ತರಗತಿ

ದಾವಣಗೆರೆ, ನ. 18- ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಎಲ್ಲ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರಗಳಲ್ಲಿ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ತರಗತಿಗಳನ್ನು ಆರಂಭಿಸಲಾಗಿದ್ದು, ಉಳಿದವರಿಗೆ ಆನ್‌ಲೈನ್‌ನಲ್ಲಿ ಮಾತ್ರ ತರಗತಿ ನಡೆಸಲು ಸೂಚಿಸಲಾಗಿದೆ ಎಂದು ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ತಿಳಿಸಿದ್ದಾರೆ.

ಸರ್ಕಾರ ಮತ್ತು ಯುಜಿಸಿ ಸೂಚನೆಯಂತೆ ಅಂತಿಮ ವರ್ಷದ ಅಂದರೆ ಸ್ನಾತಕ ಪದವಿಯ 5ನೇ ಹಾಗೂ ಸ್ನಾತಕೋತ್ತರ ಪದವಿಯ 3ನೇ (3ನೇ ಪುಟಕ್ಕೆ)



ದಾವಣಗೆರೆ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿ ವೀರಶೈವ ಮಹಾಸಭಾದ ಮಹಿಳಾ ಘಟಕದಿಂದ ಸಂಭ್ರಮಾಚರಣೆ ನಡೆಯಿತು.




ರಾಜ್ಯ ಸರ್ಕಾರದ ಕ್ರಮ ಖಂಡಿಸಿ ದಾವಣಗೆರೆ ಜಿಲ್ಲಾ ಕಾಂಗ್ರೆಸ್ ವತಿಯಿಂದ ಅಂಬೇಡ್ಕರ್ ವೃತ್ತದ ಬಳಿ ಪ್ರತಿಭಟನೆ ನಡೆಸಲಾಯಿತು.

## ವಿದ್ಯುತ್ ದರ ಏರಿಕೆ: ಕಾಂಗ್ರೆಸ್ ಪ್ರತಿಭಟನೆ

ದಾವಣಗೆರೆ, ನ.18- ಕೋವಿಡ್ ಸಂಕಷ್ಟದ ಸಂದರ್ಭದಲ್ಲೂ ವಿದ್ಯುತ್ ದರ ಏರಿಸುವ ಮೂಲಕ ಜನರಿಗೆ ಹೊರೆ ಮಾಡಿ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿಸಿರುವ ರಾಜ್ಯ ಸರ್ಕಾರದ ಕ್ರಮ ಖಂಡಿಸಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ನಗರದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿರುವ ಕೆಇಬಿ ಕಚೇರಿ ಮುಂಭಾಗ ಜಮಾಯಿಸಿದ್ದ ಪಕ್ಷದ ಮುಖಂಡರು, ಕಾರ್ಯಕರ್ತರು ವಿದ್ಯುತ್ ದರ ಏರಿಕೆ ವಿರೋಧಿಸಿ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಜಗತ್ತಿನಾದ್ಯಂತ ಕೊರೊನಾ ಸೋಂಕು ಹರಡಿ, ಸೋಂಕು ನಿಯಂತ್ರಿಸಲು ಸರ್ಕಾರಗಳು ವಿಧಿಸಿದ ಲಾಕ್‌ಡೌನ್, ಸೀಲ್‌ಡೌನ್‌ನಿಂದಾಗಿ ಎದುರಾದ ಆರ್ಥಿಕ ಸಂಕಷ್ಟದ ಕಾರಣಕ್ಕೆ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಮುಚ್ಚಿರುವ ಪರಿಣಾಮ ಲಕ್ಷಾಂತರ ಕಾರ್ಮಿಕರು, (3ನೇ ಪುಟಕ್ಕೆ)

## ದೇಶದ ಆರ್ಥಿಕತೆ ಬಲಿಷ್ಠಗೊಳಿಸುವಲ್ಲಿ ಸಹಕಾರಿ ಕ್ಷೇತ್ರ ಮುಂಚೂಣಿ



ದಾವಣಗೆರೆ,ನ.18- ಆರ್ಥಿಕವಾಗಿ ಶೋಷಣೆಗೊಳಗಾದವರನ್ನು ಸಬಲರನ್ನಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಸಹಕಾರ ಕ್ಷೇತ್ರವು ರಾಜ್ಯ ಮತ್ತು ದೇಶದ ಆರ್ಥಿಕ ಪರಿಸ್ಥಿತಿಯನ್ನು ಬಲಿಷ್ಠಗೊಳಿಸುವ ಕಾರ್ಯದಲ್ಲಿ ಮುಂಚೂಣಿಯಲ್ಲಿದೆ ಎಂದು ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಅಧ್ಯಕ್ಷರೂ ಆದ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಎನ್.ಎ. ಮುರುಗೇಶ್ ತಿಳಿಸಿದ್ದಾರೆ.

ಜಿಲ್ಲಾ ಸಹಕಾರಿ ಯೂನಿಯನ್ ನೇತೃತ್ವದಲ್ಲಿ ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಏರ್ಪಾಡಾಗಿದ್ದ ಅಖಿಲ ಭಾರತ ಸಹಕಾರ ಸಪ್ತಾಹದ ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ ತಮ್ಮ ಸ್ವಾಗತ ಭಾಷಣದಲ್ಲಿ ಅವರು ಮಾತನಾಡಿದರು.

ಸುದೀರ್ಘ 112 ವರ್ಷಗಳ ಇತಿಹಾಸ ಹೊಂದಿರುವ ಭಾರತೀಯ ಸಹಕಾರ ಕ್ಷೇತ್ರವು ದೇಶದ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರವನ್ನು ವಹಿಸಿದೆ. ಇದರಿಂದಾಗಿ ಈ ಕ್ಷೇತ್ರವನ್ನು ದೇಶದ ಆರ್ಥಿಕತೆಯಲ್ಲಿ ಬಹುದೊಡ್ಡ ಕೊಡುಗೆ ನೀಡುತ್ತಿರುವ 3ನೇ ಅತಿದೊಡ್ಡ ವಲಯವೆಂದು ಗುರುತಿಸಲಾಗಿದ್ದು, ಇದು ಸಹಕಾರ ಕ್ಷೇತ್ರದ ಪ್ರಾಮುಖ್ಯತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಅವರು ಹೇಳಿದರು.

ಗ್ರಾಮೀಣ ಭಾಗದ, ಸಮಾಜದ ದುರ್ಬಲ ವರ್ಗದ, ರೈತಾಪಿ ವರ್ಗದ ಹಿತಾಸಕ್ತಿಗಳಿಗೆ ಪೂರಕವಾಗಿ ಅತ್ಯಂತ ಪರಿಣಾಮಕಾರಿಯಾಗಿ ಸಹಕಾರ ಕ್ಷೇತ್ರ ಕಾರ್ಯ ನಿರ್ವಹಿಸುತ್ತಿದೆ. ದೇಶದ ಶೇ.98 ಗ್ರಾಮೀಣ ಪ್ರದೇಶವನ್ನು ವ್ಯಾಪಿಸಿರುವ ಈ ಸಹಕಾರಿ ಆಂದೋಲನ ಪ್ರಪಂಚದಲ್ಲೇ ದೊಡ್ಡದು. ದೇಶದ ಒಟ್ಟು ಸುಮಾರು (3ನೇ ಪುಟಕ್ಕೆ)

# ನಿತ್ಯ ಮಾಲಿನ್ಯದ ಎದುರು ದೀಪಾವಳಿ ಮಾಲಿನ್ಯ ಠುಸ್

## ದಾವಣಗೆರೆಯಲ್ಲಿ ಪ್ರತಿನಿತ್ಯವೂ ಕಾಡುತ್ತಿದೆ ವಾಯು, ಶಬ್ದ ಮಾಲಿನ್ಯ

**ಎಸ್.ಎ. ಶ್ರೀನಿವಾಸ್**

ದಾವಣಗೆರೆ, ನ. 18 – ದೀಪಾವಳಿಯ ಪಟಾಕಿ ಸಿಡಿತದಿಂದ ಮಾಲಿನ್ಯ ಹೆಚ್ಚಾಗಿ ಕೊರೊನಾ ಅಪಾಯವಿದೆ ಎಂದು ಬೊಬ್ಬೆ ಹಾಕಿದ ಸರ್ಕಾರ, ಪರಿಸರ ವಾದಿಗಳು, ಪರಿಣಿತರೆಲ್ಲ 'ಹಸಿರು ಪಟಾಕಿ' ಕಡ್ಡಾಯಕ್ಕೆ ಕಾರಣವಾದರು. ಆದರೆ, ಇದರಿಂದ ಮಾಲಿನ್ಯ ನಿಯಂತ್ರಣಕ್ಕೆ ಯಾವುದೇ ಪ್ರಯೋಜನವಾಗಿಲ್ಲ.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಂಕಿ-ಅಂಶಗಳ ಪ್ರಕಾರ ಇಡೀ ವರ್ಷದ ಮಾಲಿನ್ಯದ ಎದುರು ದೀಪಾವಳಿ ಮಾಲಿನ್ಯ ನಗಣ್ಯ. ನಿತ್ಯ ಮಾಲಿನ್ಯವೇ ದೀಪಾವಳಿಗೆ ಸವಾಲೆಸೆಯುವ ರೀತಿಯಲ್ಲಿದೆ. ಹಸಿರು ಪಟಾಕಿ ಕಡ್ಡಾಯ ಮಾಡಿದರೂ ಒಟ್ಟಾರೆ ಮಾಲಿನ್ಯದ ಮೇಲೆ ಎಳ್ಳಷ್ಟೂ ಪರಿಣಾಮವಾಗಿಲ್ಲ.

ಆರೋಗ್ಯಕರವಾಗಿರಲು ವಾಣಿಜ್ಯ ಪ್ರದೇಶದಲ್ಲಿ 65 ಡೆಸಿಬಲ್, ಕೈಗಾರಿಕಾ ಪ್ರದೇಶದಲ್ಲಿ 75 ಡೆಸಿಬಲ್, ವಸತಿ ಪ್ರದೇಶದಲ್ಲಿ 55 ಡೆಸಿಬಲ್‌ಗಿಂತ ಶಬ್ದ ಪ್ರಮಾಣ ಕಡಿಮೆ ಇರಬೇಕು ಎಂದು ಮಾಲಿನ್ಯ ನಿಯಂತ್ರಣ ಮಂಡಳಿ ಮಾನದಂಡ ನಿಗದಿಪಡಿಸಿದೆ. ಅಲ್ಲದೇ ಹಬ್ಬಗಳಂತಹ (3ನೇ ಪುಟಕ್ಕೆ)



**ವಾಹನಗಳ ಹೊಗೆ, ಹಾರ್ನ್, ಕಟ್ಟಡ ನಿರ್ಮಾಣದ ದೂಳು, ರಸ್ತೆ ಬದಿಯ ದೂಳು ಮತ್ತಿತರೆ ಕಾರಣಗಳಿಂದಾಗಿ ನಗರದಲ್ಲಿ ಹೆಚ್ಚಿನ ಮಾಲಿನ್ಯವಾಗುತ್ತಿದೆ. ವಾಯು ಹಾಗೂ ಶಬ್ದ ಮಾಲಿನ್ಯದಿಂದ ಆಗುವ ಆರೋಗ್ಯ ಹಾನಿ ತಡೆಯಲು ದೀಪಾವಳಿಯಷ್ಟೇ ಅಲ್ಲದೇ ವರ್ಷವಿಡೀ ನಿರಂತರ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ.**

**- ಕೆ.ಬಿ.ಕೊಟ್ರೇಶ್,** ಪ್ರಾದೇಶಿಕ ಪರಿಸರ ಅಧಿಕಾರಿ, ಮಾಲಿನ್ಯ ನಿಯಂತ್ರಣ ಮಂಡಳಿ


## ಮಾಲಿನ್ಯ ತಡೆಯದ ಹಸಿರು ಪಟಾಕಿ

ಕೊರೊನಾ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಹಸಿರು ಪಟಾಕಿಗಳಿಗೆ ಮಾತ್ರ ಅವಕಾಶ ನೀಡಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಪಟಾಕಿಗಳ ಮಾರಾಟ ಕಡಿಮೆಯೂ ಇತ್ತು. ಆದರೂ, ಹಸಿರು ಪಟಾಕಿ ಬಳಕೆಯಿಂದ ದೀಪಾವಳಿ ಸಂದರ್ಭದಲ್ಲಿ ಕಂಡು ಬರುವ ವಾತಾವರಣ ಹೆಚ್ಚೇನೂ ಬದಲಾಗಿಲ್ಲ.

ಕಳೆದ ವರ್ಷ ದೀಪಾವಳಿಯ ವೇಳೆ ನಗರದಲ್ಲಿ ಸರಾಸರಿ ಶಬ್ದದ ಪ್ರಮಾಣ 72.5 ಡೆಸಿಬಲ್ ಆಗಿತ್ತು. ಈ ವರ್ಷ ದೀಪಾವಳಿಯ ವೇಳೆ ಸರಾಸರಿ ಶಬ್ದದ ಪ್ರಮಾಣ 71.01ರಷ್ಟಿದೆ.

ಕಳೆದ ವರ್ಷ ದೀಪಾವಳಿ ಸಂದರ್ಭದಲ್ಲಿ ನಗರದ ಪಿ.ಬಿ. ರಸ್ತೆಯ ಸಂಚಾರಿ ಪೊಲೀಸ್ ಠಾಣೆಯ ಬಳಿ ವಾಯು ಮಾಲಿನ್ಯದ (3ನೇ ಪುಟಕ್ಕೆ)

## ಸ್ವಯಂ ಅಧಿಕಾರ ಸ್ವೀಕಾರಕ್ಕೆ ಮುಂದಾದ ಬಿಡೆನ್



**ಟ್ರಂಪ್ ಅಧಿಕಾರ ಹಸ್ತಾಂತರಕ್ಕೆ ಮುಂದಾಗದ ಹಿನ್ನೆಲೆಯಲ್ಲಿ ಹೊಸ ಹೆಜ್ಜೆ**

ವಾಷಿಂಗ್ಟನ್, ನ. 18 – ಚುನಾವಣೆಯಲ್ಲಿ ಸೋತರೂ ಅಧಿಕಾರ ಹಸ್ತಾಂತರಕ್ಕೆ ಸಹಕರಿಸಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಿರಾಕರಿಸುತ್ತಿರುವ ಹಿನ್ನೆಲೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿರುವ ಜೋ ಬಿಡೆನ್, ಸ್ವಯಂ ಅಧಿಕಾರ ಹಸ್ತಾಂತರಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಸಾರ್ವಜನಿಕ ಆರೋಗ್ಯಕ್ಕೆ ಕೊರೊನಾದಿಂದ ಬೆದರಿಕೆ ಹೆಚ್ಚಾಗುತ್ತಿರುವ ಹಾಗೂ ರಾಷ್ಟ್ರೀಯ ಭದ್ರತಾ ಸವಾಲುಗಳು ಎದುರಾಗುತ್ತಿರುವ ಹಿನ್ನೆಲೆ ಯಲ್ಲಿ ಬಿಡೆನ್ ಅವರು (3ನೇ ಪುಟಕ್ಕೆ)

## ರಕ್ಷಣಾ ಅಧಿಕಾರಿಯನ್ನು ವಜಾಗೊಳಿಸಿದ ಟ್ರಂಪ್

ವಾಷಿಂಗ್ಟನ್, ನ. 18 – ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ವಂಚನೆ ನಡೆದಿದೆ ಎಂಬ ತಮ್ಮ ನಿಲುವನ್ನು ಒಪ್ಪದ ಹೋಮ್ ಲ್ಯಾಂಡ್ ಸೆಕ್ಯುರಿಟಿ (2ನೇ ಪುಟಕ್ಕೆ)

## ಲಿಂಗಾಯತ, ಮರಾಠ ನಿಗಮಕ್ಕೆ ಸಿದ್ದರಾಮಯ್ಯ ತೀವ್ರ ವಿರೋಧ




**ಯಾವುದೇ ವೈಜ್ಞಾನಿಕ ಅಧ್ಯಯನ ಗಳಿಲ್ಲದೆ ಜಾತಿ ಆಧಾರಿತ ನಿಗಮ-ಪ್ರಾಧಿಕಾರ ಸ್ಥಾಪನೆ ಸಮಾಜ ವಿರೋಧಿ ಮಾತ್ರವಲ್ಲ, ಪ್ರಜಾಪ್ರಭುತ್ವ ವಿರೋಧಿ ತೀರ್ಮಾನ .**

ಬೆಂಗಳೂರು, ನ.18 – ಲಿಂಗಾಯತ ವೀರಶೈವ ಸಮುದಾಯ ಮತ್ತು ಮರಾಠ ಅಭಿವೃದ್ಧಿ ನಿಗಮ ಸ್ಥಾಪನೆಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರೋಧ ವ್ಯಕ್ತಪಡಿಸಿದ್ದಾರೆ. ಚುನಾವಣೆಗಳನ್ನು ಸಾಧನೆಯ ಬಲದಿಂದ ಗೆಲ್ಲಲಾಗದ ರಾಜ್ಯದ ಮತಿಹೀನ ಬಿಜೆಪಿ ಸರ್ಕಾರ ಇಂತಹ ಅಗ್ಗದ ತಂತ್ರ-ಕುತಂತ್ರಗಳನ್ನು ಮಾಡಿ ಸಮಾಜವನ್ನು ಒಡೆಯಲು ಹೊರಟಿದೆ. ಬಡತನ ನಿರ್ಮೂಲನೆ ಕಾರ್ಯಕ್ರಮಗಳಿಗೆ ವೈಜ್ಞಾನಿಕವಾದ ಅಧ್ಯಯನ ಆಧಾರಿತವಾಗಬೇಕು. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಬಡತನ ನಿರ್ಮೂಲನೆಯ (3ನೇ ಪುಟಕ್ಕೆ)

**8ನೇ ವರ್ಷದ ಪುಣ್ಯಸ್ಮರಣೆ**

ಶಿವ ಶಿವ



ಜನನ : 16-02-1945

ಮರಣ : 19-11-2012

**ದಿ|| ಹೊನ್ನೂರು ಈರಣ್ಣನವರು**

ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,

ಪತ್ನಿ : ಶ್ರೀಮತಿ ಸರೋಜಮ್ಮ ಹೊನ್ನೂರು ಈರಣ್ಣ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು, ಹೊನ್ನೂರು.

**ಸೈಟುಗಳು ಮಾರಾಟಕ್ಕಿವೆ**
1) 40x60 North ವಿವೇಕಾನಂದ ಬಡಾವಣೆ, 2) 40x60 South ಆಂಜನೇಯ ಬಡಾವಣೆಯಲ್ಲಿ, 3) 40x60 West, ವಿನಾಯಕ ಬಡಾವಣೆ, 4) 60x40 North ಸಿದ್ದವೀರಪ್ಪ ಬಡಾವಣೆ, 5) 40x80 North ವಿನಾಯಕ ಬಡಾವಣೆ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಕರ್ನಾಟಕ ಗೃಹ ಮಂಡಳಿಯಲ್ಲಿ ಮನೆಗಳು, ಸೈಟುಗಳು ಮಾರಾಟಕ್ಕಿವೆ**
30x50 North ಮನೆ, 30x40 East ಮನೆ, 40x60, 40x60 South 80 ಅಡಿ ರೋಡಿಗಿದೆ. 50x80 South, 30x50 East, 30x40 South
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ, 20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**ವಾಜಪೇಯಿ ಲೇ ಔಟ್‌ನಲ್ಲಿ ಶಿವಪಾರ್ವತಿ ಲೇ ಔಟ್‌ನಲ್ಲಿ ಜೆ.ಹೆಚ್. ಪಟೇಲ್ ಬಡಾವಣೆ**
40x30 West, 30x38 East, 30x50 North, 30x50 East, 30x40 East, 30x50 West
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ ದಿಕ್ಕಿನ ಹೊಸ ಮನೆ ಮಾರಾಟಕ್ಕಿದೆ. 30x50 ಪಶ್ಚಿಮ, 45x50 ಪಶ್ಚಿಮ ಕಾರ್ನರ್ ದಕ್ಷಿಣ ವಾಜಪೇಯಿ ಬಡಾವಣೆಯಲ್ಲಿ
ಶಾಮನೂರು ಧನ್ಯಕುಮಾರ್, ಏಜೆಂಟ್
97415 62589
ಸ್ವಾಮಿ, ಏಜೆಂಟ್ 97421 44715

**ಅಕೌಂಟೆಂಟ್ ಬೇಕಾಗಿದ್ದಾರೆ**
ಟ್ಯಾಲಿ ಅನುಭವವಿರುವ ಲೇಡಿ ಅಕೌಂಟೆಂಟ್ ಬೇಕಾಗಿದ್ದಾರೆ.
ಬಯೋಡೇಟಾದೊಂದಿಗೆ ಸಂಪರ್ಕಿಸಿ :
ಸಮಯ: ಬೆ.11.30ರಿಂದ ಸಂಜೆ 5.00ರವರೆಗೆ
ಫೋ. : 08192 254736

**ಸೈಟುಗಳು ಮಾರಾಟಕ್ಕಿವೆ**
ಉದ್ಯಾನದ ಪಕ್ಕ, ವಿನಾಯಕ ಬಡಾವಣೆಯಲ್ಲಿ 30×36 ಉತ್ತರ, 30×40 ಪಶ್ಚಿಮ ದಕ್ಷಿಣ, ಶಿವ ಪಾರ್ವತಿ ಬಡಾವಣೆಯಲ್ಲಿ 30×40 ಪಶ್ಚಿಮ, 30×56 ಪೂರ್ವ, ಮನೆಗಳು ಬಾಡಿಗೆಗೆ, ಲೀಜಿಗೆ ಇವೆ. ವಿದ್ಯಾನಗರ, ಶಿವಕುಮಾರಸ್ವಾಮಿ ಬಡಾವಣೆಯಲ್ಲಿ,
ಸ್ವಾಮಿ, ಏಜೆಂಟ್ 9742144715
ನಾಗರಾಜ ಶಾಮನೂರು 9844883303

**ತಕ್ಷಣ ಬೇಕಾಗಿದ್ದಾರೆ**
ಲೇಡಿಸ್ ಹಾಸ್ಟೆಲ್‌ನಲ್ಲಿ ಕೆಲಸ ಮಾಡಲು ಮಹಿಳಾ ಮತ್ತು ಪುರುಷ ಹೆಲ್ಪರ್ ಬೇಕಾಗಿದ್ದಾರೆ.
98457 75768
95133 55768

**ಬಿಲ್ಡಿಂಗ್ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಸೈಟ್ ಮತ್ತು ಅಪಾರ್ಟ್‌ಮೆಂಟ್ ಬಾಡಿಗೆಗೆ, ಮಾರಾಟಕ್ಕೆ ಇದೆ**
ಎಸ್.ಎಸ್. ಲೇ ಔಟ್, ಮಹಾಲಕ್ಷ್ಮಿ ಲೇ ಔಟ್, ಸಿದ್ದವೀರಪ್ಪ ಬಡಾವಣೆ, KHB ಕಾಲೋನಿ, ಜೆ. ಹೆಚ್. ಪಟೇಲ್ ನಗರ, ಬನಶಂಕರಿ ಬಡಾವಣೆ, ಕಮರ್ಷಿಯಲ್ ಸೈಟ್ ಬಾಲಾಜಿ ಲೇಔಟ್ 30×50, 30×48, 20×30, 50×50, 50×70
94481-85946

**ಕೆಲಸಕ್ಕೆ ಬೇಕಾಗಿದ್ದಾರೆ**
ವಿ ಸಾಗ್ ಬಟ್ಟೆ ಅಂಗಡಿಯಲ್ಲಿ ಬಟ್ಟೆಗಳ ಬಗ್ಗೆ ತಿಳಿದಿರುವ ಮ್ಯಾನೇಜರ್ ಬೇಕಾಗಿದ್ದಾರೆ. (20 ರಿಂದ 40 ವರ್ಷದೊಳಗಿನವರು) ಸಂಪರ್ಕಿಸಿ : ಪಿ.ಜೆ. ಬಡಾವಣೆ, ದಾವಣಗೆರೆ.
72599 99377, 96204 11377

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ಸೀಮೆಎಣ್ಣೆ ಬಂಕ್ ಎದುರು, ಮೊದಲನೇ ಮಹಡಿಯಲ್ಲಿ ಡಬಲ್ ಬೆಡ್ ರೂಂ, 2ನೇ ಮಹಡಿಯಲ್ಲಿ ಸಿಂಗಲ್ ಬೆಡ್‌ರೂಂ ಮನೆ ಬಾಡಿಗೆಗೆ ಇದೆ.
73495 98347, 94481 25056

**ಸೈಟ್ ಮಾರಾಟಕ್ಕೆ**
ಉತ್ತಮ್ ಚಂದ್ ಬಡಾವಣೆಯಲ್ಲಿ 35x64 ಅಡಿಯ ಖಾಲಿ ಸೈಟ್ (ಸೈಟ್ ನಂ.6 ಉತ್ತರ ಮುಖ) ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
86182 78338

**ಬೇಕಾಗಿದ್ದಾರೆ**
"ಮೆಡಿಹೌಸ್" ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : PUC Pass/ Fail/ Any Degree.
ಕಾವೇರಿ ಮೆಡಿಹೌಸ್ (ಪ್ರೈ)
ಚೇತನಾ ಹೋಟೆಲ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ.

**ಜಾಗ ಮಾರಾಟಕ್ಕೆ ಇದೆ**
ದಾವಣಗೆರೆ ಜಗಳೂರು ರಸ್ತೆ, ಆಲೂರುಹಟ್ಟಿ ಹತ್ತಿರ ಇರುವ 1 ಎಕರೆ ಎನ್.ಎ. (ಕೈಗಾರಿಕೆ) ಜಾಗ ಮಾರಾಟಕ್ಕಿದೆ. 80 ತ್ಯಾಗದ ಮರ, 55x26 ಅಡಿ ಶೆಡ್ ಹಾಗೂ ಬೋರ್‌ವೆಲ್ ಸೌಕರ್ಯ ಮತ್ತು 24x7 ಕರೆಂಟ್ ಸೌಲಭ್ಯ ಇದೆ. ಆಸಕ್ತರು ಸಂಪರ್ಕಿಸಿ :
ಮೊ: 83102 42294

**Clearification of Name**
I, Mohammed Yunus S/O Nazeer sab resident of # 212, 1st Main, 13th cross, Azad Nagara, Davanagere Clarifies that in my Aadhar card & Pan card my name is as " Mohammed Yunus " & in Passport my Name is "MOHAMED YUNAS" I write to state that my above all names referred to my only in futur, i will be using my name as Mohammed Yunus in all my Document.
Mohammed Yunus

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ
Slaes Girls / Boys
ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ-1

**ಹಾಲ್ ದೊರೆಯುತ್ತದೆ**
ಸಣ್ಣ ಮದುವೆ ಹಾಗೂ ಇತರೆ ಸಮಾರಂಭಗಳಿಗೆ ಹಾಲ್ ದೊರೆಯುತ್ತದೆ.
ಹೋಟೆಲ್ ಶೋವೆನ್
ಡಿ.ಸಿ ಕಛೇರಿ ಹತ್ತಿರ, ದಾವಣಗೆರೆ.
ಸಂಪರ್ಕಿಸಿ : ಫೋ. : 08192- 237277
ಮೊ. : 8152882277,8549882277

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ಮಾಳಗೊಂಡನಹಳ್ಳಿ, ಹರಪನಹಳ್ಳಿ ರೋಡ್‌ನಲ್ಲಿ 3ಎಕರೆ 4 ಗುಂಟೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ:
87109 64433

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಮಹಿಳೆಯರು ಮತ್ತು ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ ವಿಚಾರಿಸಿ.
ಫೋ. : 99646 36217

**ಬೇಕಾಗಿದ್ದಾರೆ**
ಸ್ಟೀಲ್ ಫರ್ನೀಚರ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳೆಯರು ಹಾಗೂ ಹುಡುಗರು ಬೇಕಾಗಿದ್ದಾರೆ.
ನಯನ ಏಜೆನ್ಸೀಸ್
ಚಾಮರಾಜ ಪೇಟೆ, ದಾವಣಗೆರೆ.
99162 36521

**ಬೇಕಾಗಿದ್ದಾರೆ**
ಔಷಧಿಗಳನ್ನು ಡೆಲಿವರಿ ಮಾಡಲು ಹುಡುಗರು ಬೇಕಾಗಿದ್ದಾರೆ.
ವಿಳಾಸ: ಕಾವೇರಿ ಫಾರ್ಮಾ
ಪಿ.ಜೆ. ಬಡಾವಣೆ, ಚೇತನ್ ಹೋಟೆಲ್ ಹತ್ತಿರ, ದಾವಣಗೆರೆ-577004

**ಬೇಕಾಗಿದ್ದಾರೆ**
ಔಷಧ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಸಂಪರ್ಕಿಸಿ:
ಅಮರಾವತಿ ಹಾಲಪ್ಪ
98454 84076

**ಉಚಿತ 50 ಗಿಡಗಳು**
ಮದುವೆ ಮತ್ತು ಇತರೆ ಸಮಾರಂಭಗಳಿಗೆ ತಾಂಬೂಲವಾಗಿ ರಿಟರ್ನ್ ಗಿಫ್ಟ್ 50 ಹೂವಿನ ಗಿಡಗಳನ್ನು ಉಚಿತವಾಗಿ ನೀಡಲಾಗುವುದು.
ಸಂಪರ್ಕಿಸಿ :
9141874551, 9480564551

**Simple vaastu**
ಸಿಂಪಲ್ ವಾಸ್ತು
98444 88838

**ಬೇಕಾಗಿದ್ದಾರೆ**
ಕಂಪ್ಯೂಟರ್ ಆಪರೇಟರ್ + ತೆಲುಗು ಭಾಷೆ ಬರುವ ಟೆಲಿಕಾಲರ್ ಬೇಕಾಗಿದ್ದಾರೆ.
ವಿಳಾಸ: ಕಾವೇರಿ ಫಾರ್ಮಾ
ಪಿ.ಜೆ. ಬಡಾವಣೆ, ಚೇತನ್ ಹೋಟೆಲ್ ಹತ್ತಿರ, ದಾವಣಗೆರೆ-577004

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಮನೆಯೊಂದರಲ್ಲಿ ಮನೆ ಕೆಲಸಕ್ಕೆ ಹಾಗೂ ಮನೆಯ ಎಲ್ಲಾ ಜವಾಬ್ದಾರಿ ನಿರ್ವಹಿಸಲು ಮಹಿಳೆ ಬೇಕಾಗಿದ್ದಾರೆ. ಊಟ ವಸತಿ ವ್ಯವಸ್ಥೆ ಇದೆ. ಸಂಬಳ 20,000/-
90209 05000

**ಹೈಟೆಕ್ ವಯೋವೃದ್ಧರ ಆರೈಕ ಕೇಂದ್ರ**
ನಮ್ಮಲ್ಲಿ ಪಾರ್ಶ್ವವಾಯು, ವೃದ್ದರು, ಕೈ ಕಾಲು ಸ್ವಾಧೀನ ಇಲ್ಲದವರು, ಮಾನಸಿಕರನ್ನು ನಮ್ಮಲಿ ಊಟ/ವಸತಿಯೊಂದಿಗೆ ನೋಡಿ ಕೊಳ್ಳಲಾಗುವುದು. ದಾವಣಗೆರೆ
89711 92936
76250 15036

**For Sale**
Supermarket ಗೆ ಬೇಕಾಗಿರುವ ಎಲ್ಲಾ Racks and Counter, UPS, CCTV Camera, Table, Stocks, Refrigerators, Weighing machine ಇದೆ.
ಬೇಕಾದವರು ಸಂಪರ್ಕಿಸಿ:
89717 62222

**ತಕ್ಷಣ ಬೇಕಾಗಿದ್ದಾರೆ**
TeleCaller Post ಗೆ Min 2-3 ವರ್ಷದ ಅನುಭವ ಹೊಂದಿರುವ ಯುವತಿಯರು ಬೇಕಾಗಿದ್ದಾರೆ. Qualification: PUC / Any Degree. ಆಕರ್ಷಕ ಸಂಬಳ.
ಆಸಕ್ತರು ಸಂಪರ್ಕಿಸಿ:
+91 98864 57755

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**PG ಬಿಲ್ಡಿಂಗ್ ಬಾಡಿಗೆಗೆ ಇದೆ**
16 ಸುಸಜ್ಜಿತ ಅಟ್ಯಾಚ್ಡ್ ಬಾತ್‌ರೂಂ ಇರುವ ಹಾಗೂ 1000sq feet ಡೈನಿಂಗ್ ಹಾಲ್ ಹಾಗೂ ನಲ್ಲಿ ಮತ್ತು ಬೋರ್ ನೀರು ಸೌಕರ್ಯ ಇರುವ BIET ಕಾಲೇಜ್ ರೋಡ್, ದವನ್ ಕಾಲೇಜ್ ಹತ್ತಿರ, ದಾವಣಗೆರೆ.
94484 42694
99725 35329

**Vijay Para Medical College**
Golden Public School Near, DCM Town ship Davanagere.
DMLT- (Lab Technician)
DHT- Health Inspector
DMIT - X-ray Technician
DOT- Operation Theatre
Contact: 77601 55550

**ಮಾರಾಟಕ್ಕೆ**
SS ಲೇಔಟ್( ಸಪ್ತಗಿರಿ ಸ್ಕೂಲ್ ಹತ್ತಿರ) ಮನೆ-30×38, MCC' B' ಬ್ಲಾಕ್ ಹಳೆಯ ಮನೆ - 28×64, ಭೂಮಿಕ ಲೇಔಟ್ ಮನೆ-30×40, ಭಗೀರಥ ಸರ್ಕಲ್ ಮನೆ-30×40, ಸರಸ್ವತಿ ಬಡಾವಣೆ ಮನೆ- 20×35, SS ಲೇಔಟ್ ಮನೆ-30×40(35 ಸಾವಿರ ಬಾಡಿಗೆ ಬರುವಂತಹ ಮನೆ)
78996 36597, 99165 25828

**WANTED / REQUIRED**
10000-15000 SQ. FEET INDUSTRIAL LAND / SHED IN KARUR / LOKIKERE / HANAGAVADI FOR SALE / RENT / LEASE
Contact : HITESH
94486 58255

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಹುಡುಗರು ಬೇಕಾಗಿದ್ದಾರೆ**
20 ltr Water ಕ್ಯಾನ್ ಡೆಲಿವರಿ ಕೊಡಲು ಹುಡುಗರು ಬೇಕಾಗಿದ್ದಾರೆ.
80956 52555

**ಬೇಕಾಗಿದ್ದಾರೆ**
ದಾವಣಗೆರೆ ಸುತ್ತ ಮುತ್ತಲು ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್, ರೂಂಬಾಯ್ಸ್, ಕ್ಲೀನರ್ ಬೇಕಾಗಿದ್ದಾರೆ. ಕೆಲವು ಕಡೆ ವಸತಿ ಸೌಲಭ್ಯವಿದೆ. ಕೂಡಲೇ ಸಂಪರ್ಕಿಸಿರಿ.
74113 07071
82177 93007

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ।। ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**WANTED**
Experienced tally operater. Full time job attractive salary. Only for Male.
70190 73080

**ನೇರ ಪರೀಕ್ಷೆಗಳು**
S.S.S.L.C, PUC, Technical & Non Technical Courses, Pharmacy & BHMS (Government & Private College)
ಸಂಪರ್ಕಿಸಿ: ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್ ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789
87620 58369


# ಲೆಕ್ಕಾಧಿಕಾರಿ ವರ್ಗಾವಣೆಗೆ ಸದಸ್ಯರ ಪಟ್ಟು


ಜಗಳೂರು ತಾ.ಪಂ. ಸಾಮಾನ್ಯ ಸಭೆ

ಜಗಳೂರು, ನ.18- ಸಮರ್ಪಕವಾಗಿ ಕಾರ್ಯ ನಿರ್ವಹಿಸದೆ, ಸದಸ್ಯರ ಸಲಹೆ, ಸೂಚನೆಗಳನ್ನು ಪಾಲಿಸದೆ ಏಕಪಕ್ಷೀಯವಾಗಿ ನಡೆದುಕೊಳ್ಳುತ್ತಿರುವ ತಾಲ್ಲೂಕು ಪಂಚಾಯತ್ ಲೆಕ್ಕಾಧಿಕಾರಿಯನ್ನು ವರ್ಗಾವಣೆ ಮಾಡಲು ಜಿಲ್ಲಾ ಪಂಚಾಯತ್‌ಗೆ ವರದಿ ಮಾಡುವಂತೆ ಇಂದು ನಡೆದ ಸಾಮಾನ್ಯ ಸಭೆಯಲ್ಲಿ ಸದಸ್ಯರು ಒತ್ತಾಯಿಸಿದರು.

15ನೇ ಹಣಕಾಸು ಅನುದಾನ, ಅನಿರ್ಬಂಧಿತ ಅನುದಾನ, ಎಸ್. ಇ. ಪಿ., ಟಿಎಸ್ಪಿ ಸೇರಿದಂತೆ ವಿವಿಧ ಯೋಜನೆಗಳ ಅನುದಾನದ ಕ್ರಿಯಾ ಯೋಜನೆಗಳ ಬಗ್ಗೆ ಲೆಕ್ಕಾಧಿಕಾರಿಗೆ ಸರಿಯಾದ ಮಾಹಿತಿ ಇಲ್ಲ. ಸದಸ್ಯರು ಕೇಳುವ ಮಾಹಿತಿಯನ್ನು ನೀಡುವುದಿಲ್ಲ. ಇದರಿಂದಾಗಿ ಮಾರ್ಚ್ ಒಳಗೆ ಅನುದಾನ ಸಂಪೂರ್ಣವಾಗಿ ವೆಚ್ಚ ಮಾಡುವುದು ಅಸಂಭವವೇ ಸರಿ. ತಕ್ಷಣ ಲೆಕ್ಕಾಧಿಕಾರಿಯನ್ನು ವರ್ಗಾಯಿಸಿ ಬೇರೆಯವರನ್ನು ನೇಮಿಸಲು ಕ್ರಮ ಕೈಗೊಳ್ಳಬೇಕೆಂದು ಸರ್ವ ಸದಸ್ಯರು ಕಾರ್ಯನಿರ್ವಹಣಾಧಿಕಾರಿ ಮಲ್ಲನಾಯ್ಕ ಅವರನ್ನು ಆಗ್ರಹಿಸಿದರು.

ಈ ಬಗ್ಗೆ ಸೂಕ್ತ ನಿರ್ಣಯ ಕೈಗೊಳ್ಳುವವರೆಗೂ ಸಭೆ ನಡೆಸಲು ಅವಕಾಶ ನೀಡುವುದಿಲ್ಲ ಎಂದು ಸದಸ್ಯರಾದ ತಿಮ್ಮೇಶ್, ಶಂಕರ್‌ನಾಯ್ಕ, ಟಿ. ಬಸವರಾಜ್, ತಿಪ್ಪೇಸ್ವಾಮಿ ಸೇರಿ ದಂತೆ ಬಹುತೇಕ ಸದಸ್ಯರು ಪಟ್ಟು ಹಿಡಿದರು. ಇದಕ್ಕೆ ಸಮಜಾಯಿಷಿ ನೀಡಿದ ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಮಲ್ಲನಾಯಕ್, ಲೆಕ್ಕಾಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರೂ ಸದಸ್ಯರು ಸಮಾಧಾನಗೊಳ್ಳಲಿಲ್ಲ.

15 ಹಣಕಾಸು ಯೋಜನೆ, ಅನಿರ್ಬಂಧಿತ ಅನುದಾನ ಯೋಜನೆ ತಯಾರಿಸುವಲ್ಲಿ ವಿಳಂಬವಾಗಿರುವುದು ಶೀಘ್ರವೇ ಸದಸ್ಯರ ಗಮನಕ್ಕೆ ತರಲಾಗುವುದು ಮತ್ತು ಯಾವುದೇ ಅನುದಾನ ಲ್ಯಾಪ್ಸ್ ಆಗದಂತೆ ಫೆಬ್ರವರಿ ಅಂತ್ಯದೊಳಗೆ ಎಲ್ಲ ಯೋಜನೆಯ ಕ್ರಿಯಾ ಯೋಜನೆ ಅನುದಾನವನ್ನು ವೆಚ್ಚ ಮಾಡಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಮತ್ತು ಲೆಕ್ಕಾಧಿಕಾರಿಯ ಕಾರ್ಯವೈಖರಿ ಬಗ್ಗೆ ಪ್ರತ್ಯೇಕವಾಗಿ ಸದಸ್ಯರೊಂದಿಗೆ ಸಭೆ ಕರೆದು ಚರ್ಚಿಸಲಾಗುವುದು. ಸಾಮಾನ್ಯ ಸಭೆ ನಡೆಸಲು ಅವಕಾಶ ನೀಡಬೇಕೆಂದು ಮನವಿ ಮಾಡಿಕೊಂಡರು.

ನಂತರ ನಡೆದ ಸಾಮಾನ್ಯ ಸಭೆಯ ಪ್ರಗತಿ ಪರಿಶೀಲನೆಯಲ್ಲಿ ವಿವಿಧ ಇಲಾಖೆ ಅಧಿಕಾರಿಗಳು ತಮ್ಮ ಪ್ರಗತಿ ವರದಿ ಮಂಡಿಸಿದರು. ಪಂಚಾಯತ್ ರಾಜ್ ಇಲಾಖೆ ಸಹಾಯಕ ಇಂಜಿನಿಯರ್ ಶಿವಕುಮಾರ್ ಪ್ರಗತಿ ವರದಿ ನೀಡಿದಾಗ ಮೂಡಲ ಮಾಚಿಕೆರೆ ಗ್ರಾಮದಲ್ಲಿ ಕೈಗೊಂಡಿರುವ ಕುಡಿಯುವ ನೀರಿನ ಕಾಮಗಾರಿ ಕಳಪೆಯಾಗಿದ್ದು, ಪೈಪ್‌ಲೈನ್ ಒಡೆದು ಜನರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ. ಈ ಬಗ್ಗೆ ಗ್ರಾಮ ಪಂಚಾಯ್ತಿ ಪಿಡಿಓಗೆ ಕೇಳಿದರೆ ಇಂಜಿನಿಯರ್ ಮೇಲೆ ಹೇಳುತ್ತಾರೆ. ತಕ್ಷಣ ಸರಿಪಡಿಸಿ ಎಂದು ಸದಸ್ಯರು ಒತ್ತಾಯಿಸಿದರು.

ಇಂಜಿನಿಯರ್ ನಂದೀಶ್ ಅವರು ಕಚೇರಿಗೂ ಸರಿಯಾಗಿ ಬರದೆ ಕಾಮಗಾರಿಯನ್ನು ಸರಿಯಾಗಿ ನಿರ್ವಹಿಸದೇ ಇರುವ ಬಗ್ಗೆ ಜನರಿಂದ ವ್ಯಾಪಕ ದೂರುಗಳು ಬಂದರೂ ಸಹ ಕ್ರಮ ಏಕೆ ಕೈಗೊಂಡಿಲ್ಲ ಎಂದು ಸದಸ್ಯರಾದ ತಿಮ್ಮೇಶ್, ಶಂಕರ್ ನಾಯಕ್, ಬಸವರಾಜ್ ಪ್ರಶ್ನಿಸಿದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ ಮಾತನಾಡಿ, ಪದವಿ ಕಾಲೇಜಿನ ಅಂತಿಮ ವರ್ಷದ ತರಗತಿಗಳು ಆರಂಭವಾಗಿವೆ. ಹಾಸ್ಟೆಲ್ ಸಿಬ್ಬಂದಿಗಳನ್ನು ಈಗಾಗಲೇ ಕೊರೊನಾ ಟೆಸ್ಟ್‌ಗೆ ಒಳಪಡಿಸಲಾಗಿದೆ. ಇದುವರೆಗೆ ಇನ್ನೂ ವಿದ್ಯಾರ್ಥಿಗಳು ಹಾಜರಾಗಿಲ್ಲ ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ಆದರ್ಶ ಗ್ರಾಮ ಯೋಜನೆ ಅಡಿ ಗ್ರಾಮಗಳಲ್ಲಿ ಅಗತ್ಯ ಕಾಮಗಾರಿ ಕೈಗೊಳ್ಳಲು ತಲಾ 40 ಲಕ್ಷ ರೂ. ಅನುದಾನ ಬಂದಿದ್ದು ಯೋಜನೆ ತಯಾರಿಸಲಾಗಿದೆ ಎಂದರು.

ಕಾರ್ಯನಿರ್ವಹಣಾಧಿಕಾರಿ ಮಲ್ಲನಾಯ್ಕ ಮಾತನಾಡಿದರು.

ಗ್ರಾಮೀಣ ನೀರು ಮತ್ತು ನೈರ್ಮಲ್ಯ ಇಲಾಖೆ ಎಇಇ ಹೇಮೋಜಿ ನಾಯಕ್, ಬೆಸ್ಕಾಂ ಎಇಇ ಪ್ರವೀಣ್, ಲೋಕೋಪಯೋಗಿ ಇಲಾಖೆ ಎಇಇ ರುದ್ರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎಸ್. ವೆಂಕಟೇಶ್, ಸಾಮಾಜಿಕ ವಲಯ ಅರಣ್ಯಾಧಿಕಾರಿ ಶ್ವೇತಾ ಸೇರಿದಂತೆ, ವಿವಿಧ ಇಲಾಖೆಯ ಅಧಿಕಾರಿಗಳು ವರದಿ ಸಲ್ಲಿಸಿದರು. ತಾ.ಪಂ. ಅಧ್ಯಕ್ಷೆ ಮಂಜುಳಮ್ಮ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಮುದೇಗೌಡ್ರು ಬಸವರಾಜಪ್ಪ, ಸ್ಥಾಯಿ ಸಮಿತಿ ಅಧ್ಯಕ್ಷ ಸಿದ್ದೇಶ್ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

> ಜಗಳೂರು ತಾಲ್ಲೂಕಿನಲ್ಲಿ ಕೊರೊನಾ ಪ್ರಕರಣಗಳ ಸಂಖ್ಯೆ ಇಳಿಮುಖವಾಗಿದೆ. ತಾಲ್ಲೂಕಿನಲ್ಲಿ ಈವರೆಗೂ 18 ಜನ ಮೃತಪಟ್ಟಿದ್ದಾರೆ. 40 ಪ್ರಕರಣಗಳು ಸಕ್ರಿಯವಾಗಿವೆ. ಇದುವರೆಗೂ 18,000 ರ್ಯಾಪಿಡ್ ಟೆಸ್ಟ್ ಮಾಡಲಾಗಿದೆ. 23,000 ಗಂಟಲು ದ್ರವ ಪರೀಕ್ಷೆ ನಡೆಸಲಾಗಿದೆ.
>
> - ಡಾ. ನಾಗರಾಜ್, ತಾಲ್ಲೂಕು ವೈದ್ಯಾಧಿಕಾರಿ

# ಜಾತಿ ಮೀಸಲಾತಿ ಹೆಚ್ಚಳಕ್ಕೆ ಉಪಸಮಿತಿ

(1ನೇ ಪುಟದಿಂದ) ಸಂದರ್ಭದಲ್ಲಿ ತಿಳಿಸಿದರು.

ಮರಾಠ ಸಮುದಾಯ ನಿಗಮ ಸ್ಥಾಪಿಸಲು ಸಂಪುಟ ಸಮ್ಮತಿಸಿದೆ. ಈ ನಿಗಮಕ್ಕೆ ಎಷ್ಟು ಹಣ ನಿಗದಿ ಮಾಡಬೇಕೆಂಬುದರ ಬಗ್ಗೆ ಇನ್ನು ಚರ್ಚೆಯಾಗಿಲ್ಲ. ಸಮುದಾಯದ ಅಭಿವೃದ್ಧಿ ದೃಷ್ಟಿಯಿಂದ ನಿಗಮ ಮಾಡುತ್ತದೆಯೇ ಹೊರತು, ಪ್ರಾಧಿಕಾರ ರಚನೆ ಮಾಡುತ್ತಿಲ್ಲ ಎಂದವರು ಸ್ಪಷ್ಟಪಡಿಸಿದರು.

ಒಂದು ಸಮುದಾಯದ ಅಭಿವೃದ್ಧಿ ವಿಷಯದಲ್ಲಿ ಯಾಕೆ ವಿರೋಧ ಮಾಡುತ್ತಿದ್ದಾರೆ.

ಸರ್ಕಾರ ಕೆಲವು ನಿರ್ಧಾರ ತೆಗೆದುಕೊಂಡಾಗ ಪರ, ವಿರೋಧ ಕೇಳಿ ಬರುತ್ತದೆ. ಆದರೂ ಅಭಿವೃದ್ಧಿ ದೃಷ್ಟಿಯಿಂದ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಮಾಧುಸ್ವಾಮಿ ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

## ಪರ-ವಿರೋಧದ ದನಿ

(1ನೇ ಪುಟದಿಂದ) ಅವರೊಂದಿಗೆ ನಾನೂ ನಿಲ್ಲುತ್ತೇನೆ ಎಂದು ಎಚ್ಚರಿಸಿದ್ದಾರೆ.

**ಈ ನಡುವೆ ಹೇಳಿಕೆ ನೀಡಿರುವ ಕಂಪ್ಲಿ ಶಾಸಕ ಜೆ.ಎನ್.ಗಣೇಶ್, ವಿಜಯನಗರ ಜಿಲ್ಲೆಗೆ ಕಂಪ್ಲಿ ತಾಲ್ಲೂಕು ಸೇರಿಸುವಂತೆ ಪ್ರಸ್ತಾವನೆ ಕಳಿಸಲಾಗುವುದು. ಸೇರ್ಪಡೆ ಮಾಡದಿದ್ದರೆ ಜನತೆ, ಮುಖಂಡರೊಂದಿಗೆ ಸೇರಿ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.**

## ವಿಧಾನ ಮಂಡಲ ಅಧಿವೇಶನ

(1ನೇ ಪುಟದಿಂದ) ದೊಡ್ಡ ಪ್ರಮಾಣದ ಹಾನಿಯುಂಟಾಗಿದೆ. ರಾಜ್ಯ ಸರ್ಕಾರದ ಕೋರಿಕೆಗೆ ಮನ್ನಣೆ ನೀಡಿ, ಕೇಂದ್ರ ಐದು ನೂರು ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಈ ಹಣವೂ ಸೇರಿದಂತೆ, ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಈ ಪ್ರದೇಶದಲ್ಲಿ ಕೈಗೊಳ್ಳಲಾಗುವುದು. ಕೇಂದ್ರದಿಂದ ನಮಗೆ ಮತ್ತಷ್ಟು ಪರಿಹಾರ ದೊರೆಯುವ ನಿರೀಕ್ಷೆ ಇದೆ. ಇದರ ಜೊತೆಗೆ ಬೆಳೆ ಪರಿಹಾರವೂ ದೊರೆಯಬಹುದಾಗಿದೆ ಎಂದೂ ಅವರು ತಿಳಿಸಿದ್ದಾರೆ.

ಇಷ್ಟರ ನಡುವೆಯೂ ರಾಜ್ಯದ ಅನುದಾನದಲ್ಲೇ ತುರ್ತು ಕಾಮಗಾರಿಗಳನ್ನು ಮತ್ತು ಪರಿಹಾರಗಳನ್ನು ಕೈಗೊಂಡಿರುವುದಾಗಿ ತಿಳಿಸಿದರು.

ಕಾವೇರಿ ಜಲ ಅಭಿವೃದ್ಧಿ ನಿಗಮ, ಕೃಷ್ಣಾ ಜಲ ಅಭಿವೃದ್ಧಿ ನಿಗಮ ಹಾಗೂ ವಿಶ್ವೇಶ್ವರಯ್ಯ ಅಭಿವೃದ್ಧಿ ನಿಗಮಗಳ ವ್ಯಾಪ್ತಿಯಲ್ಲಿ ನೀರಾವರಿ ಕಾಮಗಾರಿ ಕೈಗೆತ್ತಿಕೊಳ್ಳಲು ಮತ್ತು ಹೊಲಗಳಿಗೆ ಹೊಸದಾಗಿ ನೀರುಣಿಸಲು ಒಟ್ಟಾರೆ ಎರಡು ಸಾವಿರ ಕೋಟಿ ರೂ. ಹಣವನ್ನು ಈ ಸಂಸ್ಥೆಗಳು ಸಾಲವಾಗಿ ಪಡೆಯಲು ಸರ್ಕಾರ ಅನುಮತಿ ನೀಡಿದೆ ಎಂದು ತಿಳಿಸಿದರು.

2021 ರ ಸಾರ್ವತ್ರಿಕ ರಜೆಗೆ ಅನುಮೋದನೆ ನೀಡಿದ್ದು, ಇದರಲ್ಲಿ 21 ಸಾರ್ವತ್ರಿಕ ರಜೆಗಳು ಮತ್ತು 19 ನಿರ್ಬಂಧಿತ ರಜೆಗಳಿಗೆ ಸಂಪುಟ ಅನುಮೋದನೆ ನೀಡಿದೆ ಎಂದರು.

# 'ಗ್ರಾಮ ಒನ್' ಕಾರ್ಯಕ್ರಮಕ್ಕೆ ಇಂದು ಚಾಲನೆ

(1ನೇ ಪುಟದಿಂದ) ಯೋಜನೆಗಳ, ರಾಜ್ಯದ ವಿವಿಧ ಕೃಷಿ ಮಾರುಕಟ್ಟೆ / ಮಂಡಿ ದರಗಳ ಮಾಹಿತಿ ನೀಡುವುದರ ಜೊತೆಗೆ, ಸಕಾಲ ಹಾಗೂ ಸೇವಾಸಿಂಧು ಯೋಜನೆಗಳ ಸೇವೆ, ಸಾರ್ವಜನಿಕ ಕುಂದುಕೊರತೆಗಳ ಸ್ವೀಕಾರ ಮತ್ತು ಮಾಹಿತಿ ಹಕ್ಕು ಕಾಯ್ದೆಯಡಿ ಆನ್-ಲೈನ್ ಪೋರ್ಟಲ್‌ನಲ್ಲಿ ಅರ್ಜಿಗಳ ಸಲ್ಲಿಕೆಗೆ ಅವಕಾಶ ಕಲ್ಪಿಸಲಿದೆ ಎಂದು ರಾಜ್ಯ ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಗ್ರಾಮ ಒನ್, ಸೇವಾಸಿಂಧು ಅಡಿ ಲಭ್ಯವಿರುವ 750 ಕ್ಕೂ ಹೆಚ್ಚು ಸೇವೆಗಳನ್ನು ಒಂದೇ ಸೂರಿನಡಿ ನೀಡಲಿದೆ. ಇದರೊಂದಿಗೆ ನಾಗರಿಕರು ತಮ್ಮ ಯಾವುದೇ ದೂರುಗಳನ್ನು, ಮಾಹಿತಿ ಹಕ್ಕು ಅಧಿನಿಯಮದಡಿ ಆನ್ ಲೈನ್ ಅರ್ಜಿಗಳನ್ನು ಹಾಗೂ ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸುವ ಇತರೆ ಸೇವೆಗಳನ್ನೂ ಪಡೆಯಬಹುದು.

ಈ ಕೇಂದ್ರ ಮೈಕ್ರೋ ಬ್ಯಾಂಕ್ ಆಗಿ ಕಾರ್ಯ ನಿರ್ವಹಿಸುವ ಉದ್ದೇಶವನ್ನೂ ಹೊಂದಿದ್ದು, ಇದು ಸಣ್ಣ ಮೊತ್ತದ ಠೇವಣಿಗೆ ಅವಕಾಶ ನೀಡಲಿದೆ. ಸ್ತ್ರೀಶಕ್ತಿ ಗುಂಪುಗಳು, ವಿಧವೆಯರು, ಹಿರಿಯ ನಾಗರಿಕರು ಮತ್ತಿತರರಿಗೆ ಇದು ನೆರವಾಗಲಿದೆ. ಕೇಂದ್ರದ ಆಪರೇಟರ್ ಬ್ಯಾಂಕಿಂಗ್ ಪ್ರತಿನಿಧಿಯಾಗಿಯೂ ಕಾರ್ಯ ನಿರ್ವಹಿಸಲಿದ್ದಾರೆ.

ವೈ - ಫೈ ಹಾಟ್‌ಸ್ಪಾಟ್ ಹಾಗೂ ವಿಡಿಯೋ ಕಾನ್ಫರೆನ್ಸ್‌ನಂತಹ ಸೌಲಭ್ಯ, ಸ್ಥಿರ ಅಂತರ್ಜಾಲ ಸಂಪರ್ಕ ಸೌಲಭ್ಯಗಳು, ಡಿಜಿಟಲ್ ಲೈಬ್ರರಿಗಳೂ ನಾಗರಿಕರಿಗೆ ಲಭ್ಯವಾಗಲಿವೆ.

ಗ್ರಾಮಗಳಲ್ಲಿ ಈಗಾಗಲೇ ಸರ್ಕಾರದಿಂದ ಗುರುತಿಸಲಾಗಿರುವ ಗ್ರಾಮ ಮಟ್ಟದ ಉದ್ಯಮಿಗಳು, ಸ್ತ್ರೀಶಕ್ತಿ ಸಂಘಗಳ ಮುಖೇನ ಈ ಯೋಜನೆ ಅನುಷ್ಠಾನಗೊಳಿಸಬಹುದಾಗಿದೆ. ಈ ಯೋಜನೆಯನ್ನು ಗ್ರಾಮ ಮಟ್ಟದ ಕೇಂದ್ರ ನಿರ್ವಾಹಕರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡು ಜಾರಿಗೆ ತರಬಹುದು.

ಈ ಯೋಜನೆ ಜಾರಿಗಾಗಿ ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ಸಮಿತಿಗಳು ರಚನೆಯಾಗಲಿವೆ. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಸದಸ್ಯ ಕಾರ್ಯದರ್ಶಿಯಾಗಲಿದ್ದಾರೆ. ಗ್ರಾಮ ಒನ್ ಸೇವೆಗಳ ಅರ್ಜಿಗಳ ವಿಲೇವಾರಿಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗುವುದು.

# ವಜಾಗೊಳಿಸಿದ ಟ್ರಂಪ್

(1ನೇ ಪುಟದಿಂದ) ಅಧಿಕಾರಿಯನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಜಾಗೊಳಿಸಿದ್ದಾರೆ.

ಚುನಾವಣೆಯಲ್ಲಿ ವಂಚನೆ ನಡೆದಿದೆ ಎಂದು ಟ್ರಂಪ್ ಪ್ರಮುಖ ರಾಜ್ಯಗಳಲ್ಲಿ ಪ್ರಕರಣಗಳನ್ನು ದಾಖಲಿಸಿದ್ದಾರೆ. ಆದರೆ, ಇದುವರೆಗೂ ಅವರು ಯಾವುದೇ ಸಾಕ್ಷಿಗಳನ್ನು ಒದಗಿಸಿಲ್ಲ.

ಕಳೆದ ನವೆಂಬರ್ 3ರಂದು ನಡೆದ ಚುನಾವಣೆ ಅಮೆರಿಕದ ಇತಿಹಾಸದಲ್ಲೇ ಅತ್ಯಂತ ಸುರಕ್ಷಿತ ಚುನಾವಣೆಗಳಲ್ಲಿ ಒಂದಾಗಿದೆ ಎಂದು ರಕ್ಷಣಾ ಅಧಿಕಾರಿ ಕ್ರಿಸ್ಟೋಫರ್ ಕ್ರೆಬ್ಸ್ ಹೇಳಿದ್ದರು. ಅವರನ್ನು ವಜಾಗೊಳಿಸಿರುವ ಬಗ್ಗೆ ಟ್ರಂಪ್ ಟ್ವೀಟ್ ಮೂಲಕ ತಿಳಿಸಿದ್ದಾರೆ. ಇದಕ್ಕೂ ಮುಂಚೆ ರಕ್ಷಣಾ ಕಾರ್ಯದರ್ಶಿ ಮಾರ್ಕ್ ಎಸ್ಪರ್ ಅವರನ್ನು ಟ್ರಂಪ್ ವಜಾಗೊಳಿಸಿದ್ದರು. ಜನವರಿಯಲ್ಲಿ ಟ್ರಂಪ್ ಅಧಿಕಾರ ಬಿಡುವಷ್ಟರಲ್ಲಿ ಸಿಐಎ ನಿರ್ದೇಶಕ ಜಿನಾ ಹಾಸ್ಪೆಲ್ ಹಾಗೂ ಎಫ್.ಬಿ.ಐ. ನಿರ್ದೇಶಕ ಕ್ರಿಸ್ಟೋಫರ್ ರೇ ಅವರನ್ನೂ ವಜಾಗೊಳಿಸಬಹುದು ಎನ್ನಲಾಗುತ್ತಿದೆ.

# ಪೆಟ್ರೋಲ್, ಡೀಸೆಲ್ ಕಾರು ನಿಷೇಧ

(1ನೇ ಪುಟದಿಂದ) ನಡೆಯಲಿರುವ ಬೆನ್ನಲ್ಲೇ ಈ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಜಾನ್ಸನ್ ಅವರು ವಿಡಿಯೋ ಲಿಂಕ್ ಮೂಲಕ ಶಾಸನ ಸಭೆಯನ್ನು ಉದ್ದೇಶಿಸಿ ಮಾತನಾಡುವ ಸಂದರ್ಭದಲ್ಲಿ ಯೋಜನೆಯ ವಿವರಗಳನ್ನು ಪ್ರಕಟಿಸಲಿದ್ದಾರೆ.


ನಮ್ಮ ಭೂಮಿಯ ಪುನಶ್ಚೇತನ ಹಾಗೂ ನಮ್ಮ ಆರ್ಥಿಕತೆ ಜೊತೆ ಜೊತೆಯಾಗಿ ಸಾಗಬೇಕಿದೆ. ಈ ಹಿನ್ನೆಲೆಯಲ್ಲಿ ಹಸಿರು ಕೈಗಾರಿಕಾ ಕ್ರಾಂತಿಯ ಮಹತ್ವಾಕಾಂಕ್ಷಿ ಯೋಜನೆಗೆ ಮುಂದಾಗಿದ್ದೇವೆ ಎಂದು ಜಾನ್ಸನ್ ತಿಳಿಸಿದ್ದಾರೆ.

2030ರ ವೇಳೆಗೆ ಹೊಸ ಪೆಟ್ರೋಲ್ ಹಾಗೂ ಡೀಸೆಲ್ ಕಾರುಗಳ ಮಾರಾಟ ನಿಷೇಧಿಸಲಾಗುವುದು. ನಂತರ 2035ರಲ್ಲಿ ಹೈಬ್ರಿಡ್ ಕಾರುಗಳನ್ನು ಕೈ ಬಿಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಂಗಾಲ ರಹಿತ ರಸ್ತೆ ಸಾರಿಗೆ ವ್ಯವಸ್ಥೆಗೆ ಮುಂದಾದ ಮೊದಲ ಜಿ7 ದೇಶ ಬ್ರಿಟನ್ ಆಗಿದೆ. 2030ರ ವೇಳೆಗೆ ಖಾಸಗಿ ವಲಯಕ್ಕಿಂತ ಮೂರು ಪಟ್ಟು ಹೆಚ್ಚು ಹಣವನ್ನು ಹಸಿರು ವಲಯಕ್ಕೆ ತೊಡಗಿಸಲು ಬ್ರಿಟನ್ ಸರ್ಕಾರ ನಿರ್ಧರಿಸಿದೆ.



॥ ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ॥

**ಗುರು ಲಿಂಗ ಜಂಗಮ ಗಣಾರಾಧನೆ ಆಹ್ವಾನ ಪತ್ರಿಕೆ**



ಶ್ರೀ ಎನ್.ಎಂ. ಸದಾಶಿವಯ್ಯನವರು
ಜನನ : 13.09.1929
ನಿಧನ: 15.11.2020

ಶ್ರೀ ।।ಷ।।ಬ್ರ।। ಓಂಕಾರ ಶಿವಾಚಾರ್ಯ ಸ್ವಾಮಿಗಳು ಪುರವರ್ಗ ಮಠ ಆವರಗೊಳ್ಳ,
ಶ್ರೀ ಸದ್ಗುರು ಶಿವಯೋಗಿ ಶಿವಕುಮಾರ ಹಾಲಸ್ವಾಮಿಗಳು ಬೃಹನ್ಮಠ ರಾಂಪುರ ಇವರುಗಳ ಸಾನ್ನಿಧ್ಯದಲ್ಲಿ
ದಾವಣಗೆರೆ ಸಿಟಿ ವಾಸಿ
ಶ್ರೀಮತಿ ಮಹಾಲಿಂಗಮ್ಮ ಸದಾಶಿವಯ್ಯ
ಇವರು ಮಾಡುವ ವಿಜ್ಞಾಪನೆಗಳು
ದಿನಾಂಕ: 15.11.2020 ನೇ ಭಾನುವಾರ ಬೆಳಿಗ್ಗೆ 9.20ಕ್ಕೆ ನನ್ನ ಪೂಜ್ಯ ಪತಿದೇವರಾದ
ಶ್ರೀ ಎನ್.ಎಂ. ಸದಾಶಿವಯ್ಯನವರು
(ನಿವೃತ್ತ ಕಾರ್ಯದರ್ಶಿಗಳು ವಿ.ಎಸ್.ಎಸ್.ಎನ್. ಹೊಳೆಸಿರಿಗೆರೆ)
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಗುರು ಲಿಂಗ ಜಂಗಮ ಗಣಾರಾಧನೆಯನ್ನು
ದಿನಾಂಕ 19.11.2020 ನೇ ಗುರುವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗೃಹ ಶ್ರೀ ಹಾಲೇಶ ಕೃಪ, 18ನೇ ಕ್ರಾಸ್, ಮೋತಿ ಲೇಔಟ್, ಕೆ.ಇ.ಬಿ, ಆಫೀಸ್ ಎದುರು, ಕೆ.ಟಿ.ಜೆ ನಗರ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು
ಶ್ರೀಮತಿ ಮಹಾಲಿಂಗಮ್ಮ ಸದಾಶಿವಯ್ಯ ಮತ್ತು ಮಕ್ಕಳು, ಅಳಿಯಂದಿರು,
ಶ್ರೀಮತಿ ಶಾಮಲಾ ಶ್ರೀ ಎನ್.ಎಂ.ಹಾಲಸ್ವಾಮಿ ಮತ್ತು ಮಕ್ಕಳು
ಹೊಳೆಸಿರಿಗೆರೆ ಮತ್ತು ನಂದಿಗಾವಿ, ಗ್ರಾಮಸ್ಥರು ಹಾಗೂ ಬಂಧು ಮಿತ್ರರು.
ಮೊ: 99456 11512

**ಅಸಗೋಡು ಗಂಗಮ್ಮ ನಿಧನ**


ಜಗಳೂರು ತಾಲ್ಲೂಕು, ಅಸಗೋಡು ಗ್ರಾಮದ ವಾಸಿ
ಸಂತೇಬೆನ್ನೂರು ಮಠದ ಗಂಗಮ್ಮ (85)
ಅವರು ದಿನಾಂಕ 18.11.2020ರ ಬುಧವಾರ ಸಂಜೆ 6.40ಕ್ಕೆ ನಿಧನರಾಗಿದ್ದಾರೆ.
ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 19.11.2020 ರಂದು ಗುರುವಾರ ಮಧ್ಯಾಹ್ನ 1 ಗಂಟೆಗೆ ಬೆಂಗಳೂರು ರಾಜಾಜಿ ನಗರದ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಲಿದೆ.
ಇಂತಿ ದುಃಖತಪ್ತರು
ಸಂತೇಬೆನ್ನೂರು ಮಠದ ವಂಶಸ್ಥರು ಹಾಗೂ ಅಸಗೋಡು ಗ್ರಾಮಸ್ಥರು.
94804 24603, 81058 60617

**ಶ್ರೀಮತಿ ಮಹದೇವಮ್ಮ ನಿಧನ**


ದಾವಣಗೆರೆ ಸಿಟಿ ಆವರಗೆರೆ ಗ್ರಾಮದ ವಾಸಿ ದಿ.ಹಾಲವರ್ತಿ ದೊಡ್ಡ ಹನುಮಂತಪ್ಪನವರ ಧರ್ಮಪತ್ನಿ ಶ್ರೀಮತಿ ಮಹದೇವಮ್ಮ (88) ಅವರು ದಿನಾಂಕ: 18.11.2020 ರಂದು ಬುಧವಾರ ಮಧ್ಯಾಹ್ನ 2 ಗಂಟೆಗೆ ನಿಧನರಾಗಿದ್ದಾರೆ. ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 19.11.2020 ರಂದು ಗುರುವಾರ ಬೆಳಿಗ್ಗೆ 11 ಗಂಟೆಗೆ ಆವರಗೆರೆ ಗ್ರಾಮದಲ್ಲಿ ನೆರವೇರಲಿದೆ.


**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**

## ಜಗಳೂರಿನಲ್ಲಿ ವೀರಶೈವ ಸಮಾಜದಿಂದ ವಿಜಯೋತ್ಸವ




ಜಗಳೂರು, ನ.18- ರಾಜ್ಯ ಸರ್ಕಾರ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ಸ್ಥಾಪಿಸಿರುವುದನ್ನು ತಾಲ್ಲೂಕು ವೀರಶೈವ ಸಮಾಜ ಸ್ವಾಗತಿಸಿದ್ದು, ಸ್ಥಳೀಯ ಗಾಂಧಿ ವೃತ್ತದಲ್ಲಿ ವಿಜಯೋತ್ಸವವನ್ನು ಆಚರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಖಿಲ ಭಾರತ ವೀರಶೈವ ಲಿಂಗಾಯತ ಸಮಾಜದ ತಾಲ್ಲೂಕು ಅಧ್ಯಕ್ಷ ಜೆ.ಎನ್. ಶಿವನಗೌಡ, ಮುಖ್ಯಮಂತ್ರಿ ಬಿ.ಎಸ್. ಯಡ್ಯೂರಪ್ಪ ಬಹುದಿನಗಳ ಬೇಡಿಕೆಯಾಗಿದ್ದ ವೀರಶೈವ ಲಿಂಗಾಯತ ಅಭಿವೃದ್ಧಿ ಮಂಡಳಿ ಸ್ಥಾಪನೆ ಮಾಡಿದ್ದಾರೆ. ಸರ್ಕಾರಕ್ಕೆ ಹಾಗೂ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಮುಖಂಡರಾದ ಎಮ್.ಎಸ್. ಪಾಟೀಲ್. ಸಿದ್ದೇಶ್, ರೇವಣ್ಣ, ಎನ್.ಎಸ್.ರಾಜು, ಆರ್.ವಿ.ಎಸ್. ವೀರೇಶ್. ವೀರೇಂದ್ರ ಪಾಟೀಲ್. ಶಿವಕುಮಾರ ಸ್ವಾಮಿ, ರೇಖಾ, ವಾಣಿ ಹಾಗು ಇನ್ನಿತರರಿದ್ದರು.

# 'ಸಹಕಾರ' ದುರ್ಬಲವಾದರೆ ಈಸ್ಟ್ ಇಂಡಿಯಾದಂತಹ ಗುಲಾಮಗಿರಿ



**ದೊಡ್ಡ ಬ್ಯಾಂಕುಗಳೇ ಉತ್ತಮ ಎಂಬುದು ಕೇಂದ್ರ ಸರ್ಕಾರದ ಭ್ರಾಂತಿ**

**-ಹೆಚ್.ಕೆ. ಪಾಟೀಲ್**

ದಾವಣಗೆರೆ, ಜ. 18 – ಆರ್ಥಿಕ ವಲಯದಲ್ಲಿ ಬ್ಯಾಂಕುಗಳು ದೊಡ್ಡದಿರಲಿ ಎಂಬ ಭ್ರಾಂತಿ ಕೇಂದ್ರ ಸರ್ಕಾರದ್ದಾಗಿದೆ. ಇದರಿಂದಾಗಿ ಸಹಕಾರಿ ಬ್ಯಾಂಕುಗಳಿಗೆ ಹಿನ್ನಡೆ ತರುವ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದು, ಜನ ಸಮುದಾಯವನ್ನು ಮತ್ತೆ ಈಸ್ಟ್ ಇಂಡಿಯಾ ಕಾಲದಂತಹ ಗುಲಾಮಗಿರಿಗೆ ದೂಡಲಾಗುತ್ತಿದೆ ಎಂದು ಶಾಸಕ ಹಾಗೂ ಸಹಕಾರಿ ಧುರೀಣ ಹೆಚ್.ಕೆ. ಪಾಟೀಲ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ನಿನ್ನೆ ಆಯೋಜಿಸಲಾಗಿದ್ದ 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡುತ್ತಿದ್ದರು.

ರಾಷ್ಟ್ರೀಕೃತ ಬ್ಯಾಂಕುಗಳು ಸ್ವತಂತ್ರ ಅಸ್ತಿತ್ವ ಉಳಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಅವುಗಳನ್ನು ವಿಲೀನ ಮಾಡಲಾಗುತ್ತಿದೆ. ಆದರೆ, ಸಣ್ಣ ಬ್ಯಾಂಕುಗಳು ಸೇವೆ ಪರಿಣಾಮಕಾರಿಯಾಗಿ ನೀಡುತ್ತವೆ ಎಂದವರು ಅಭಿಪ್ರಾಯ ಪಟ್ಟರು.

ಸಹಕಾರಿ ಸಂಸ್ಥೆಗಳು ರೂಪುಗೊಳ್ಳುವ ಮುಂಚೆ ಸ್ವಾಭಿಮಾನ ಒತ್ತೆ ಇಡುವಂತೆ ಸಾಹುಕಾರರ ಬಳಿ ಸಾಲ ಕೇಳಬೇಕಿತ್ತು. ಸಹಕಾರಿ ವಲಯದ ಹಿರಿಯರು ಈ ಪರಿಸ್ಥಿತಿ ತಪ್ಪಿಸಲು ಸಮಾಜದ ವಿವಿಧ ಸಮುದಾಯಗಳಿಗೆ ಪತ್ತಿನ ಸಹಕಾರ ಸಂಘಗಳನ್ನು ರಚಿಸಿ ಸ್ವಾಭಿಮಾನಿಗಳಾಗುವಂತೆ ಮಾಡಿದರು ಎಂದು ಪಾಟೀಲ್ ಹೇಳಿದರು. ಆದರೆ, ಈಗ ಕೇಂದ್ರ ಸರ್ಕಾರ ಬ್ಯಾಂಕಿಂಗ್ ಕಾಯ್ದೆಗೆ ಸುಗ್ರೀವಾಜ್ಞೆ ಮೂಲಕ ತಿದ್ದುಪಡಿ ತಂದು ಸಣ್ಣ ಬ್ಯಾಂಕುಗಳನ್ನು ಮುಚ್ಚಿಸುವ ಯೋಚನೆ ನಡೆಸಿದೆ. ಇದು ಜನರ ಹಾಗೂ ಸಮುದಾಯದ ಸ್ವಾಭಿಮಾನಕ್ಕೆ ಧಕ್ಕೆ ತರುತ್ತದೆ. ಬ್ರಿಟಿಷರ ಈಸ್ಟ್ ಇಂಡಿಯಾ ಕಂಪನಿಯ ಕಾಲದಂತೆ ಸಮುದಾಯವನ್ನು ಗುಲಾಮರನ್ನಾಗಿ ಮಾಡಲಿದೆ ಎಂದವರು ಎಚ್ಚರಿಸಿದರು.

ಸಹಕಾರಿ ವಲಯವನ್ನು ಸರ್ಕಾರಗಳು ಇತರೆ ವಲಯಗಳಿಗೆ ಸಮನಾಗಿ ಕಾಣುತ್ತಿಲ್ಲ. ಮುಳುಗುವ ಅಪಾಯವಿದೆ ಎಂದು ಹೇಳಲಾಗುವ ಖಾಸಗಿ ಬ್ಯಾಂಕುಗಳಲ್ಲಿ ಸರ್ಕಾರಿ ಇಲಾಖೆಗಳು ಖಾತೆ ತೆರೆಯಲು ಅನುಮತಿ ಇದೆ. ಆದರೆ, ಸಹಕಾರಿ ಬ್ಯಾಂಕುಗಳಲ್ಲಿ ಖಾತೆ ತೆರೆಯದಂತೆ ನಿರ್ಬಂಧಿಸಲಾಗಿದೆ ಎಂದವರು ಆಕ್ಷೇಪಿಸಿದರು.

ನಗರ ಸಹಕಾರಿ ಬ್ಯಾಂಕುಗಳಲ್ಲಿ 6 ಲಕ್ಷ ಕೋಟಿ ರೂ. ಠೇವಣಿ ಇದೆ. ಇದರ ಶೇ.25ರಷ್ಟು ಹಣವನ್ನು ಎಸ್.ಎಲ್.ಆರ್. ರೂಪದಲ್ಲಿ ಜಿಲ್ಲಾ ಸಹಕಾರಿ, ಇಲ್ಲವೇ ಅಪೆಕ್ಸ್ ಬ್ಯಾಂಕುಗಳಲ್ಲಿ ಇರಿಸಲಾಗಿತ್ತು. ಈಗ ಆ ಹಣವನ್ನು ಆರ್.ಬಿ.ಐ. ನಿರ್ದೇಶನದಂತೆ ಸಹಕಾರಿ ವಲಯದಿಂದ ಹೊರಗಿನ ವ್ಯವಸ್ಥೆಗೆ ತೆಗೆದುಕೊಂಡು ಹೋಗಲಾಗಿದೆ ಎಂದೂ ಅವರು ಅಸಮಾಧಾನ ವ್ಯಕ್ತಪಡಿಸಿದರು.

ರೈತ ಉತ್ಪಾದಕರ ಸಂಘಗಳಿಗೆ ಕೇಂದ್ರ ಸರ್ಕಾರ ಶೇ.80ರಷ್ಟು ಸಬ್ಸಿಡಿ ಕೊಡುತ್ತಿದೆ. ಆದರೆ, ಅದೇ ರೀತಿಯ ಕೆಲಸ ಮಾಡುವ ವಿವಿಧೋದ್ದೇಶ ಸಹಕಾರ ಸಂಘಗಳಿಗೆ ಯಾವುದೇ ಅನುದಾನ ನೀಡುತ್ತಿಲ್ಲ. ಈ ರೀತಿಯ ಭೇದ ಮಾಡುವುದನ್ನು ಸರ್ಕಾರ ನಿಲ್ಲಿಸಬೇಕು ಎಂದರು.

ಪತ್ತಿನ ಸಹಕಾರಿ ಸಂಸ್ಥೆಗಳು ರಾಜ್ಯಗಳ ನಿಯಂತ್ರಣದಲ್ಲಿದ್ದವು. ಕೇಂದ್ರ ಸರ್ಕಾರ ಸುಗ್ರೀವಾಜ್ಞೆಯ ಮೂಲಕ ರಾಜ್ಯಗಳ ಅಧಿಕಾರವನ್ನು ಕಸಿದುಕೊಂಡಿದೆ. ಈಗ ಪತ್ತಿನ ಸಹಕಾರ ಬ್ಯಾಂಕುಗಳನ್ನು ಸಂಪೂರ್ಣ ರಿಸರ್ವ್ ಬ್ಯಾಂಕ್ ಅಧೀನಕ್ಕೆ ಒಳಪಡಿಸಲಾಗಿದೆ. ರಾಜ್ಯಗಳ ಅಧಿಕಾರಕ್ಕೆ ಲಗಾಮು ಹಾಕಲಾಗಿದೆ. ಇದನ್ನು ಸರಿ ಪಡಿಸಬೇಕಿದೆ ಎಂದು ಪಾಟೀಲ್ ಹೇಳಿದರು.

## ವಿದ್ಯುತ್ ದರ ಏರಿಕೆ : ಪ್ರತಿಭಟನೆ

**(1ನೇ ಪುಟದಿಂದ)** ಉದ್ಯೋಗಿಗಳು ಕೆಲಸ ಕಳೆದುಕೊಂಡು ದೈನಂದಿನ ಜೀವನ ನಡೆಸುವುದೇ ಕಷ್ಟಕರವಾಗಿದೆ. ಇಂತಹ ಸಂದರ್ಭದಲ್ಲಿ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಅವೈಜ್ಞಾನಿಕವಾಗಿ ವಿದ್ಯುತ್ ದರ ಹೆಚ್ಚಿಸಿರುವುದು ಖಂಡನೀಯವಾಗಿದೆ ಎಂದು ಕಿಡಿ ಕಾರಿದರು. ಈ ವರ್ಷ ಉತ್ತಮ ಮಳೆಯಾಗಿರುವುದರಿಂದ ಜಲಪಾತಗಳು ಮೈದುಂಬಿ ಧುಮ್ಮುಕ್ಕುತ್ತಿವೆ. ಹೀಗಾಗಿ ವಿದ್ಯುತ್ ಸಹ ಹೆಚ್ಚಿನ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತಿದೆ. ಆದರೆ, ಜನರ ಸಂಕಷ್ಟದ ಬಗ್ಗೆ ಅಲ್ಪವೂ ಕಾಳಜಿ ಇಲ್ಲದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರ ಪ್ರತಿ ಯುನಿಟ್ ವಿದ್ಯುತ್‌ಗೆ 40 ಪೈಸೆ ದರ ಹೆಚ್ಚಿಸುವ ಮೂಲಕ ಜನರ ಗಾಯದ ಮೇಲೆ ಬರೆ ಎಳೆದಿದೆ ಎಂದು ಆರೋಪಿಸಿದರು.

ನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಎ. ನಾಗರಾಜ್ ಮಾತನಾಡಿ, ಜನರು ತಮ್ಮ ಜೀವನ ನಡೆಸುವುದು ಹೇಗೆಂಬ ಆಲೋಚನೆಯಲ್ಲಿ ಪರಿತಪಿಸುತ್ತಿರುವ ಸಂದರ್ಭದಲ್ಲಿ ಬೆಸ್ಕಾಂ ವಿದ್ಯುತ್ ಬಳಕೆದಾರರಿಂದ ಒಂದು ಸಾವಿರ ರೂ. ಠೇವಣಿ ಸಂಗ್ರಹಕ್ಕೆ ಮುಂದಾಗಿರುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಮಾತನಾಡಿ, ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಕ್ಕೆ ನಿಜವಾಗಿಯೂ ಜನಪರ ಕಾಳಜಿ ಇದ್ದರೆ, ತಕ್ಷಣವೇ ಹೆಚ್ಚಳ ಮಾಡಿರುವ ವಿದ್ಯುತ್ ದರವನ್ನು ವಾಪಸ್ ಪಡೆಯಬೇಕು ಹಾಗೂ ಗ್ರಾಹಕರಿಂದ ಒಂದು ಸಾವಿರ ರೂ. ಠೇವಣಿ ಸಂಗ್ರಹಿಸುತ್ತಿರುವುದನ್ನು ಕೈಬಿಡಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಪಂಚಾಯತ್ ಸದಸ್ಯ ಕೆ.ಎಚ್. ಓಬಳಪ್ಪ, ನಗರ ಪಾಲಿಕೆ ಸದಸ್ಯ ಕೆ. ಚಮನ್‌ಸಾಬ್, ಮುಖಂಡರಾದ ಅಯೂಬ್ ಪೈಲ್ವಾನ್, ಅನಿತಾಬಾಯಿ ಮಾಲತೇಶ್, ಶುಭಮಂಗಳ, ಪುಷ್ಪ ಪಾಟೀಲ್, ಮುಜಾಹಿದ್, ಡೋಲಿ ಚಂದ್ರು, ಜಿ. ರಾಕೇಶ್, ಹೆಚ್. ಹರೀಶ್, ದಾಕ್ಷಾಯಣಮ್ಮ, ಕೆ.ಜಿ. ಶಿವಕುಮಾರ್, ಅಲ್ಲಾವಲಿ ಶಾಬುದ್ದೀನ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ಪದವಿ ವಿದ್ಯಾರ್ಥಿಗಳಿಗೆ ತರಗತಿ

**(1ನೇ ಪುಟದಿಂದ)** ಸೆಮಿಸ್ಟರ್‌ಗೆ ಮಾತ್ರ ಭೌತಿಕ ಹಾಗೂ ಆನ್‌ಲೈನ್ ತರಗತಿ ನಡೆಸಲಾಗು ವುದು. ಯಾವ ಮಾಧ್ಯಮದಲ್ಲಿ ಪಾಠ ಕೇಳಬೇಕೆಂಬುದನ್ನು ವಿದ್ಯಾರ್ಥಿಗಳೇ ನಿರ್ಧರಿಸಬೇಕು ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ತರಗತಿಗಳಿಗೆ ಭೌತಿಕವಾಗಿ ಹಾಜರಾಗಲು ಬಯಸುವ ವಿದ್ಯಾರ್ಥಿಗಳು ಕೋವಿಡ್-19 ಪರೀಕ್ಷೆ ವೈದ್ಯಕೀಯ ಪ್ರಮಾಣ ಪತ್ರ, ಪಾಲಕರ ಅನುಮತಿ ಮತ್ತು ವೈಯಕ್ತಿಕ ನಡಾವಳಿ ಪತ್ರವನ್ನು ವಿಭಾಗಕ್ಕೆ ಸಲ್ಲಿಸುವುದು ಕಡ್ಡಾಯ. ಪ್ರಮಾಣ ಪತ್ರ ನೀಡದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುವುದಿಲ್ಲ. ಅಲ್ಲದೆ ಪ್ರಾಧ್ಯಾಪಕರೂ ವೈದ್ಯಕೀಯ ತಪಾಸಣಾ ಪತ್ರ ಸಲ್ಲಿಸಬೇಕು ಎಂದು ಸೂಚಿಸಿದ್ದಾರೆ.

ಸ್ನಾತಕೋತ್ತರ ಪದವಿಯ ಪ್ರಥಮ ಸೆಮಿಸ್ಟರ್ ಹಾಗೂ ಸ್ನಾತಕ ಪದವಿಯ ಪ್ರಥಮ ಮತ್ತು ಮೂರನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಆನ್‌ಲೈನ್‌ನಲ್ಲಿ ಮಾತ್ರ ಪಾಠ ಪ್ರವಚನ ಮುಂದುವರೆಸಲು ಸೂಚಿಸಲಾಗಿದೆ. ಅದಾಗ್ಯೂ ವಿದ್ಯಾರ್ಥಿಗಳು ತಮಗೆ ಬೇಕಾದ ಮಾಹಿತಿ ಅಥವಾ ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಮುಂಚಿತವಾಗಿ ಅನುಮತಿ ಪಡೆದು ವಾರದಲ್ಲಿ ಒಮ್ಮೆ ಮಾತ್ರ ಕಾಲೇಜಿಗೆ ಭೌತಿಕವಾಗಿ ಹೋಗಿ ಬರಲು ಅನುಮತಿ ನೀಡಲಾಗುವುದು. ಇದಕ್ಕೂ ಸಹ ಪಾಲಕರ ಒಪ್ಪಿಗೆ ಪತ್ರ ಸಲ್ಲಿಸಲೇಬೇಕು ಎಂದು ಹೇಳಿದ್ದಾರೆ.

ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿಯ ಆರೋಗ್ಯ ರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಶೈಕ್ಷಣಿಕ ಅಧ್ಯಯನಕ್ಕೆ ಅಗತ್ಯವಿರುವ ಎಲ್ಲ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ಒದಗಿಸಲು ಸೂಚಿಸಲಾಗಿದೆ. ಆನ್‌ಲೈನ್ ತರಗತಿಗಳ ಜೊತೆಗೆ ವಿಡಿಯೋ, ಆಡಿಯೋ, ಆಡಿಯೋ ವಿಷುವಲ್, ಮಲ್ಟಿಮೀಡಿಯ, ಯೂಟೂಬ್, ಪಾಡ್‌ಕಾಸ್ಟ್ ಸೇರಿದಂತೆ ವಿವಿಧ ಮಾಧ್ಯಮಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳ ಅಧ್ಯಯನಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

## ಸ್ವಯಂ ಅಧಿಕಾರ ಸ್ವೀಕಾರಕ್ಕೆ ಮುಂದಾದ ಬಿಡೆನ್

**(1ನೇ ಪುಟದಿಂದ)** ಈ ಕ್ರಮ ಪ್ರಾಮುಖ್ಯತೆ ಪಡೆದುಕೊಂಡಿದೆ. ಅಧ್ಯಕ್ಷರಾಗಿ ಆಯ್ಕೆಯಾದವರಿಗೆ ಅಧಿಕೃತ ವಾಗಿ ಗುಪ್ತಚರ ಮಾಹಿತಿಯನ್ನು ನೀಡುವುದು ಅಮೆರಿಕದ ಸಂಪ್ರದಾಯವಾಗಿದೆ. ಆದರೆ, ಇದನ್ನು ತಡೆದಿರುವ ಹಿನ್ನೆಲೆಯಲ್ಲಿ ಬಿಡೆನ್ ಅವರು ಆನ್‌ಲೈನ್ ಮೂಲಕ ಗುಪ್ತಚರ, ರಕ್ಷಣೆ ಹಾಗೂ ರಾಯಭಾರಿ ವಿಷಯಗಳ ಬಗ್ಗೆ ಕೆಲ ಪರಿಣಿತರಿಂದ ಮಾಹಿತಿ ಪಡೆದಿದ್ದಾರೆ. ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಕಮಲಾ ಹ್ಯಾರಿಸ್ ಅವರಿಗೆ ಮಂಗಳವಾರ ಸೆನೆಟ್ ಗುಪ್ತಚರ ಸಮಿತಿಯು ತುಸು ಔಪಚಾರಿಕ ಮಾಹಿತಿಯನ್ನು ನೀಡಿದೆ. ಆದರೂ, ಸಾಂಪ್ರದಾಯಿಕವಾಗಿ ನೀಡ ಲಾಗುತ್ತಿದ್ದ ಮಾಹಿತಿಗಿಂತ ಇದು ಕಡಿಮೆಯಾಗಿದೆ. ಅಮೆರಿಕ ಶತಮಾನದಲ್ಲೇ ಭೀಕರವಾದ ಕೊರೊನಾ ಸೋಂಕಿನ ಸಮಸ್ಯೆ ಎದುರಿಸುತ್ತಿದೆ. ಇಷ್ಟಾದರೂ ಹಾಲಿ ಆಡಳಿತ, ಬಿಡೆನ್ ಅವರ ತಂಡ ಮಾಹಿತಿ ಪಡೆಯಲು ಅವಕಾಶ ನೀಡುತ್ತಿಲ್ಲ. ಹೀಗಾಗಿ ಬಿಡೆನ್ ಪ್ರತಿನಿಧಿಗಳು ನೇರವಾಗಿ ಫಾರ್ಮಾ ಕಂಪನಿಗಳನ್ನು ಭೇಟಿ ಮಾಡಿ ಲಸಿಕೆ ಕುರಿತು ಮಾಹಿತಿ ಸಂಗ್ರಹಿಸುತ್ತಿದ್ದಾರೆ.

ಟ್ರಂಪ್ ಸುಗಮವಾಗಿ ಅಧಿಕಾರ ಹಸ್ತಾಂತರಿಸುವ ಬಗ್ಗೆ ಇನ್ನೂ ಯಾವುದೇ ಸೂಚನೆ ತೋರದ ಹಿನ್ನೆಲೆಯಲ್ಲಿ, ಬಿಡೆನ್ ಅಧಿಕಾರ ಪಡೆಯುವ ಹೊಸ ರೀತಿಯ ಐತಿಹಾಸಿಕ ಮಾರ್ಗಕ್ಕೆ ಮುಂದಾಗಿದ್ದಾರೆ.

ಅಮೆರಿಕದ ಅಧ್ಯಕ್ಷೀಯ ಚುನಾವಣೆ ಮುಗಿದು ಎರಡು ವಾರಗಳಾದರೂ ಸಹ, ಬಿಡೆನ್ ಅವರಿಗೆ ಸೋಂಕು ಹಾಗೂ ರಕ್ಷಣೆ ಕುರಿತ ಮಾಹಿತಿ ನೀಡುವುದನ್ನು ಟ್ರಂಪ್ ತಡೆಯುತ್ತಿದ್ದಾರೆ.

ಬಿಡೆನ್ ಅಧಿಕಾರ ವಹಿಸಿಕೊಂಡ ನಂತರ ಸೆನೆಟ್ ಅನುಮೋದನೆಯೊಂದಿಗೆ 1,200ಕ್ಕೂ ಹೆಚ್ಚು ಹುದ್ದೆಗಳನ್ನು ತುಂಬಬೇಕಾಗಿದೆ. ಇದರಲ್ಲಿ ಸಂಪುಟದ ಹುದ್ದೆಗಳೂ ಸೇರಿವೆ. ಅಧಿಕಾರ ಹಸ್ತಾಂತರಕ್ಕೆ ಸಹಕಾರ ಸಿಗದೇ ಹೋದರೆ ಈ ಎಲ್ಲ ಪ್ರಕ್ರಿಯೆ ಕಠಿಣವಾಗಲಿದೆ ಎಂದು ಹೇಳಲಾಗುತ್ತಿದೆ.

ಈ ನಡುವೆ, ಟ್ರಂಪ್ ಅವರ ರಿಪಬ್ಲಿಕನ್ ಪಕ್ಷದಲ್ಲೇ ಬಿಡೆನ್ ಅವರನ್ನು ಮುಂದಿನ ಅಧ್ಯಕ್ಷರಾಗಿ ಒಪ್ಪಿಕೊಳ್ಳುವುದು ಹೆಚ್ಚಾಗುತ್ತಿದೆ. ಜನವರಿ 20ರಂದು ಬಿಡೆನ್ ಅಧಿಕಾರ ವಹಿಸಿಕೊಳ್ಳಬೇಕಿದೆ.

ಟ್ರಂಪ್ ನಿಕಟವರ್ತಿಯಾಗಿದ್ದ ಇಸ್ರೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೇತನ್ಯಾಹೂ ಅವರೇ ಗುರುವಾರ ಮೊದಲ ಬಾರಿಗೆ ಬಿಡೆನ್ ಅವರನ್ನು ಅಧ್ಯಕ್ಷರಾಗಿ ಆಯ್ಕೆಯಾದವರು ಎಂದು ಹೇಳಿದ್ದರು.

## ಕಟಾವು : ಕೊಯ್ಲೋತರ ತರಬೇತಿ

ದಾವಣಗೆರೆ, ನ.18- ಕೃಷಿ ಉತ್ಪಾದನೆಯು ಕಟಾವು ನಂತರ ವಿವಿಧ ರೀತಿಯ ಕೊಯ್ಲೋತರ ನಷ್ಟಗಳಿಗೆ ತುತ್ತಾಗುತ್ತಿದೆ. ಪ್ರಮಾಣ ಮತ್ತು ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತಿದ್ದು, ಇಂತಹ ಅಪಾರ ನಷ್ಟ ತಡೆಗಟ್ಟಲು ಸಾಧ್ಯವಾಗಬಹುದಾದ ತಾಂತ್ರಿಕತೆ ಕುರಿತು ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ ಇವರ ಆಶ್ರಯದಲ್ಲಿ 'ಆಹಾರ ಧಾನ್ಯಗಳ ಕಟಾವು ನಂತರದ ತಾಂತ್ರಿಕತೆಗಳು' ವಿಷಯ ಕುರಿತು ಆನ್‌ಲೈನ್ ತರಬೇತಿಯು ನಾಡಿದ್ದು ದಿನಾಂಕ 20ರಂದು ನಡೆಯಲಿದೆ.

ರಾಯಚೂರು ಕೃಷಿ ವಿಶ್ವ ವಿದ್ಯಾಲಯದ ಮುಖ್ಯಸ್ಥ ಡಾ. ಉದಯಕುಮಾರ್ ನಿಡೋಣಿ ವಿಷಯ ಮಂಡಿಸಲಿದ್ದಾರೆ. ರೈತರು ಗೂಗಲ್ ಮೀಟ್ ಲಿಂಕ್ : meet.google.com/bcw-epjq-yaw.

ವಿವರಕ್ಕೆ ಸಂಪರ್ಕಿಸಿ : ಕೃಷಿ ನಿರ್ದೇಶಕರು, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ, ದಾವಣಗೆರೆ (99459 10090 / 82779 28964).

## ಬಲಿಷ್ಠಗೊಳಿಸುವಲ್ಲಿ ಸಹಕಾರಿ ಕ್ಷೇತ್ರ ಮುಂಚೂಣಿ

**(1ನೇ ಪುಟದಿಂದ)** 7.5 ಲಕ್ಷ ಹಳ್ಳಿಗಳ ಪೈಕಿ ಸುಮಾರು 6,44,458 ಹಳ್ಳಿಗಳನ್ನು ಪ್ರಾಥಮಿಕ ಸಹಕಾರ ಸಂಘಗಳು ವ್ಯಾಪಿಸಿರುವುದು ಈ ಕ್ಷೇತ್ರದ ಆಗಾಧತೆಯನ್ನು ನಿರೂಪಿಸುತ್ತದೆ ಎಂದರು.

ದೇಶದ ಆರ್ಥಿಕತೆಯ ವಿವಿಧ ಆಯಾಮಗಳಲ್ಲಿ ಸಹಕಾರಿ ಕ್ಷೇತ್ರದ ಶೇಕಡವಾರು ಪಾಲನ್ನು ನೋಡುವುದಾದರೆ ನೇರ ಉದ್ಯೋಗದಲ್ಲಿ ಶೇ.13.30 ಕೊಡುಗೆಯನ್ನು ನೀಡಿದ್ದು, ಸ್ವಯಂ ಉದ್ಯೋಗವೊಂದರಲ್ಲೇ ಸುಮಾರು ಶೇ.10.91 ಪಾಲನ್ನು ಹೊಂದಿದೆ. ಗ್ರಾಮೀಣ ಭಾಗದ ಜನರಲ್ಲಿ ಉತ್ತಮ ಕೌಶಲ್ಯ ಅಭಿವೃದ್ಧಿಯನ್ನು ಉತ್ತೇಜಿಸುವಂತಹ ತರಬೇತಿ ನೀಡಿ, ನಿರುದ್ಯೋಗ ಸಮಸ್ಯೆ ನಿವಾರಿಸುವಲ್ಲಿ ಸಹಕಾರಿ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿರುವುದು ಬಹುಮುಖ್ಯವಾಗಿ ಗಮನಿಸಬೇಕಾದ ಅಂಶ ಎಂದು ಅವರು ತಿಳಿಸಿದರು.

ದೇಶದ ಜಿಡಿಪಿ ಸುಮಾರು ಶೇ. 8ರಷ್ಟು ಪಾಲನ್ನು ನೀಡುತ್ತಿರುವ ಸಹಕಾರಿ ಕ್ಷೇತ್ರವು ಆರ್ಥಿಕತೆಗೆ ಬಹುದೊಡ್ಡ ಕೊಡುಗೆ ನೀಡುತ್ತಿದ್ದು, ಈ ಕ್ಷೇತ್ರಕ್ಕೊಂದು ಸ್ಪಷ್ಟ ರಾಷ್ಟ್ರೀಯ ನೀತಿ ರೂಪಿಸುವ ಅಗತ್ಯತೆ ಇದೆ ಎಂದು ಮುರುಗೇಶ್ ಅಂಕಿ-ಅಂಶಗಳೊಂದಿಗೆ ಪ್ರತಿಪಾದಿಸಿದರು.

ದೇಶದಲ್ಲೇ ಮೊಟ್ಟಮೊದಲ ಬಾರಿಗೆ ಕರ್ನಾಟಕದಲ್ಲಿ ಸಹಕಾರ ಸಂಘ ಸ್ಥಾಪನೆಯಾಗುವ ಮೂಲಕ ಸಹಕಾರ ಚಳುವಳಿಗೆ ನಾಂದಿ ಹಾಡಿದೆ ಎಂದು ಹೇಳಿದ ಅವರು, ಗದಗ ಜಿಲ್ಲೆಯ ಕಣಗಿನ ಹಾಳ ಗ್ರಾಮದ ಸಣ್ಣ ರಾಮನಗೌಡ ಪಾಟೀಲ್ ಅವರು, ಸಮಾನ ಮನಸ್ಕರೊಡನೆ ಸೇರಿ ಸಹಕಾರಿ ಸಂಘವನ್ನು 1904ರಲ್ಲಿ ಆರಂಭಿಸಿದ್ದರು ಎಂದು ತಿಳಿಸಿದರು.

ಇಂದು ಸಹಕಾರಿ ಚಳುವಳಿ ವ್ಯಾಪಕವಾಗಿ ಬೆಳೆದಿದ್ದು, ಸಹಕಾರಿ ಕ್ಷೇತ್ರ ಇಲ್ಲದೇ ಯಾವುದೇ ರಂಗವೂ ಬೆಳವಣಿಯಾಗುವುದು ಸಾಧ್ಯವಿಲ್ಲ ಎಂಬ ಸ್ಥಿತಿಗೆ ಬಂದಿದೆ ಎಂದು ಉದಾಹರಣೆಯೊಂದಿಗೆ ವಿವರಿಸಿದ ಮುರುಗೇಶ್, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಹಕಾರಿ ಕ್ಷೇತ್ರವನ್ನು ಸದೃಢಗೊಳಿಸಲು ಅನೇಕ ಯೋಜನೆಗಳನ್ನು ರೂಪಿಸಿದ್ದು, ವಿವಿಧ ಕ್ಷೇತ್ರಗಳಲ್ಲಿರುವ ಬಡವರನ್ನು ಗುರುತಿಸಿ, ಆರ್ಥಿಕ ನೆರವು ಒದಗಿಸಲಾಗುತ್ತಿದೆ ಎಂದು ಹೇಳಿದರು.

# ಅಕ್ರಮ ಆಸ್ತಿ : 10 ಕೋಟಿ ರೂ. ದಂಡ ಪಾವತಿಸಿದ ಶಶಿಕಲಾ

**(1ನೇ ಪುಟದಿಂದ)** ನಿರೀಕ್ಷಿತ ಬಿಡುಗಡೆ ಯಿಂದ ಅವರನ್ನು ಹಾಗೂ ಕುಟುಂಬ ದವರನ್ನು ಎ.ಐ.ಎ.ಡಿ.ಎಂ.ಕೆ. ಹಾಗೂ ಸರ್ಕಾರದಿಂದ ದೂರ ಇಡುವ ನಿಲುವಿನಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲ ಎಂದು ಮುಖ್ಯಮಂತ್ರಿ ಕೆ.ಪಳನಿಸ್ವಾಮಿ ಹೇಳಿದ್ದಾರೆ.

ಹತ್ತು ಕೋಟಿ ರೂ.ಗಳ ದಂಡವನ್ನು ಡಿಮ್ಯಾಂಡ್ ಡ್ರಾಫ್ಟ್ ಮೂಲಕ 34ನೇ ನಗರ ಸಿವಿಲ್ ನ್ಯಾಯಾಲಯದಲ್ಲಿ ಜಮಾ ಮಾಡಲಾಗಿದೆ ಎಂದು ಶಶಿಕಲಾ ಪರ ವಕೀಲ ಎನ್. ರಾಜ ಸೆಂತೂರು ಪಾಂಡಿಯನ್ ತಿಳಿಸಿದ್ದಾರೆ.

ನ್ಯಾಯಾಲಯ ಈ ಬಗ್ಗೆ ಜೈಲಿನ ಅಧಿಕಾರಿಗಳಿಗೆ ಸೂಚನೆ ನೀಡುವ ನಿರೀಕ್ಷೆ ಇದೆ. ಬಿಡುಗಡೆಗೆ ನಿಗದಿಯಾಗಿರುವ ಜನವರಿ 27, 2021ಕ್ಕೆ ಮುಂಚೆಯೇ ಅವರು ಜೈಲಿನಿಂದ ಹೊರ ಬರುವ ನಿರೀಕ್ಷೆ ಇದೆ ಎಂದು ವಕೀಲ ಪಾಂಡಿಯನ್ ಹೇಳಿದ್ದಾರೆ.

ಸನ್ನಡತೆಗಾಗಿ ಖೈದಿಗಳನ್ನು ಅವಧಿಗೆ ಮುಂಚೆ ಬಿಡುಗಡೆ ಮಾಡುವ ಅವಕಾಶ ಇದೆ. ಶಶಿಕಲಾ ಅವರು ಶೀಘ್ರದಲ್ಲೇ ಬಿಡುಗಡೆಯಾಗುವ ನಿರೀಕ್ಷೆ ಇದೆ ಎಂದವರು ತಿಳಿಸಿದ್ದಾರೆ. ಅಕ್ರಮ ಆಸ್ತಿ ಪ್ರಕರಣದಲ್ಲಿ ಶಶಿಕಲಾ ಹಾಗೂ ಅವರ ಇಬ್ಬರು ಸಂಬಂಧಿಕರು ನಾಲ್ಕು ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಬಂಧೀಖಾನೆಯಲ್ಲಿದ್ದಾರೆ.

# ಮಾಲಿನ್ಯದ ಎದುರು ದೀಪಾವಳಿ ಮಾಲಿನ್ಯ ಠುಸ್

**(1ನೇ ಪುಟದಿಂದ)** ಸಂದರ್ಭದಲ್ಲಿ ಸದ್ದಿನ ಪ್ರಮಾಣ ಮಾಮೂಲಿಗಿಂತ 10 ಡೆಸಿಬಲ್ ಹೆಚ್ಚಾಗುವುದನ್ನು ಸಾಮಾನ್ಯ ಎಂದೇ ಪರಿಗಣಿಸಲಾಗುತ್ತದೆ.

ದೀಪಾವಳಿ ಹಬ್ಬದ ವೇಳೆ ನಗರದ ಚೌಕಿ ಪೇಟೆಯಲ್ಲಿ ಸರಾಸರಿ ಶಬ್ದದ ಪ್ರಮಾಣ 71 ಡೆಸಿಬಲ್‌ಗಳವರೆಗೆ ತಲುಪಿದೆ. ಹಬ್ಬದ ವೇಳೆ 75 ಡೆಸಿಬಲ್‌ವರೆಗಿನ ಸದ್ದು ಮಿತಿಯೊಳಗಿದೆ ಎಂದು ಭಾವಿಸಲಾಗುತ್ತದೆ. ಹೀಗಾಗಿ ಶಬ್ದ ಮಾಲಿನ್ಯ ಕಡಿಮೆಯೇ ಇದೆ.

ಆಸಕ್ತಿಕರ ವಿಷಯವೆಂದರೆ ಹಬ್ಬವಲ್ಲದ ದಿನಗಳಲ್ಲೂ ನಗರದ ಹಲವಾರು ಪ್ರದೇಶಗಳಲ್ಲಿ ದೀಪಾವಳಿ ಪಟಾಕಿಗಳನ್ನು ಮೀರಿಸುವ ಶಬ್ದ ಮಾಲಿನ್ಯವಿದೆ. ಕಳೆದ ನವೆಂಬರ್ 12ರಂದು ಪಾಲಿಕೆ ಬಳಿ ಶಬ್ದದ ಪ್ರಮಾಣ 70.1 ಡೆಸಿಬಲ್, ಪಿ.ಬಿ. ರಸ್ತೆಯ ಸಂಚಾರಿ ಪೊಲೀಸ್ ಠಾಣೆಯ ಬಳಿ 67.1, ಅರುಣ ಟಾಕೀಸ್ ಬಳಿ 86.5, ಕಾಳಿಕಾದೇವಿ ರಸ್ತೆಯಲ್ಲಿ 69.1, ಗಾಂಧಿ ಸರ್ಕಲ್‌ನಲ್ಲಿ 86.7 ಹಾಗೂ ನಿಟುವಳ್ಳಿಯ ಗ್ರಾಮಾಂತರ ಪೊಲೀಸ್ ಠಾಣೆ ಬಳಿ ವೃತ್ತದಲ್ಲಿ 84.4 ಡೆಸಿಬಲ್‌ನಷ್ಟಿದೆ.

**ವಾಯು ಮಾಲಿನ್ಯವೂ ಕಡಿಮೆ :** ವಾಯು ಮಾಲಿನ್ಯ ಅಳತೆ ಮಾಡುವ ಉಪಕರಣಗಳನ್ನು ಹರಿಹರದ ಪಾಲಿಫೈಬರ್ಸ್ ಕ್ವಾರ್ಟರ್ಸ್, ಮಾಲಿನ್ಯ ನಿಯಂತ್ರಣ ಕಚೇರಿಯ ಆವರಣ ಹಾಗೂ ಪಿ.ಬಿ. ರಸ್ತೆಯ ಸಂಚಾರಿ ಪೊಲೀಸ್ ಠಾಣೆಗಳಲ್ಲಿ ಅಳವಡಿಸಲಾಗಿದೆ.

ಪರಿಸರದಲ್ಲಿ ಪ್ರತಿ ಚದುರ ಮೀಟರ್‌ಗೆ 100ಕ್ಕಿಂತ ಕಡಿಮೆ ದೂಳಿನ ಕಣ ಇರಬೇಕು ಎಂದು ಮಾರ್ಗಸೂಚಿ ತಿಳಿಸಿದೆ. ದೀಪಾವಳಿ ಸಮಯದಲ್ಲೂ ಸಹ ವಸತಿ ಪ್ರದೇಶಗಳಲ್ಲಿ ದೂಳಿನ ಪ್ರಮಾಣ ಗರಿಷ್ಠ ಮಟ್ಟಕ್ಕಿಂತ ಸುಮಾರು ಅರ್ಧದಷ್ಟು ಕಡಿಮೆಯೇ ಇದೆ.

ಪೊಲೀಸ್ ಠಾಣೆಯ ಘಟಕದಲ್ಲಿ ಮಾತ್ರ ವಾಯುಮಾಲಿನ್ಯ ನಿಗದಿಗಿಂತ ಹೆಚ್ಚಾಗಿದೆ. ಈ ಘಟಕದಲ್ಲಿ ದೂಳಿನ ಕಣದ ಪ್ರಮಾಣ ಹಬ್ಬದ ದಿನಗಳಲ್ಲಿ 198ರವರೆಗೂ ತಲುಪಿದೆ. ಈ ಪ್ರದೇಶದಲ್ಲಿ ದೂಳು, ಸಾಮಾನ್ಯ ದಿನಗಳಲ್ಲೂ ತೀರಾ ಹೆಚ್ಚಾಗಿರುತ್ತದೆ. ಹಬ್ಬದ ಮುನ್ನಾ ವಾರದ ನ.9ರಂದೂ ಸಹ ಈ ಪ್ರದೇಶದಲ್ಲಿ ದೂಳಿನ ಕಣದ ಪ್ರಮಾಣ 121ರವರೆಗೆ ಇತ್ತು ಎಂಬುದು ಗಮನಾರ್ಹ.

ದೀಪಾವಳಿ ಮಾಲಿನ್ಯದ ನೆಪದಲ್ಲಿ ಪಟಾಕಿ ನಿಷೇಧದಂತಹ ಕ್ರಮಗಳು ಪರಿಸರ ಮಾಲಿನ್ಯ ತಡೆಯಲು ಸಹಕಾರಿಯಾಗುವುದಿಲ್ಲ. ಮಾಲಿನ್ಯ ನಿಯಂತ್ರಣಕ್ಕಾಗಿ ವರ್ಷವಿಡೀ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ಅಗತ್ಯವಿದೆ. ಗಡ್ಡಕ್ಕೆ ಬೆಂಕಿ ಹತ್ತಿದಾಗ ಬಾವಿ ತೋಡುವಂತೆ ಪಟಾಕಿಗಳನ್ನು ನಿಷೇಧಿಸುವುದರಿಂದ ಮಾಲಿನ್ಯ ಕಡಿಮೆಯಾಗುವುದಿಲ್ಲ ಎಂಬುದನ್ನು ಸಂಬಂಧಿಸಿದವರು ಇನ್ನಾದರೂ ಅರಿಯಬೇಕಿದೆ.

### ಕೈಗಾರಿಕಾ ವಲಯವೇ ತುಸು ಶಾಂತ !

ಕೈಗಾರಿಕಾ ವಲಯಗಳಲ್ಲಿ ಗರಿಷ್ಠ 75 ಡೆಸಿಬಲ್‌ಗಳವರೆಗೆ ಶಬ್ದದ ಪ್ರಮಾಣ ಇರಬಹುದು ಎಂದು ನಿಗದಿ ಪಡಿಸಲಾಗಿದೆ. ಆದರೆ, ನಗರದ ಕೈಗಾರಿಕಾ ವಲಯದಲ್ಲಿ ನ.16ರಂದು ಕಂಡು ಬಂದ ಶಬ್ದದ ಪ್ರಮಾಣ 71.3ರಷ್ಟಿದೆ. ಕರೂರು ಇಂಡಸ್ಟ್ರಿಯಲ್ ಏರಿಯಾದಲ್ಲಿ ಶಬ್ದದ ಪ್ರಮಾಣ 78.9ರಷ್ಟಿದೆ.

ಮತ್ತೊಂದೆಡೆ ವಸತಿ ಪ್ರದೇಶಗಳಲ್ಲಿ ಶಬ್ದದ ಪ್ರಮಾಣ 55 ಡೆಸಿಬಲ್ ಒಳಗೆ ಇರಬೇಕು ಎಂಬ ಮಿತಿ ಇದೆ. ಆದರೆ, ವಿದ್ಯಾನಗರ, ಚಿಗಟೇರಿ ಆಸ್ಪತ್ರೆಗಳ ವಲಗಳಂತಹ ಪ್ರದೇಶ ಬಿಟ್ಟರೆ ಬಹುತೇಕ ಪ್ರದೇಶಗಳಲ್ಲಿ ಶಬ್ದ ಮಾಲಿನ್ಯ ನಿಗದಿಗಿಂತ ಹೆಚ್ಚಾಗಿದೆ ಎಂದು ಮಾಲಿನ್ಯ ನಿಯಂತ್ರಣ ಮಂಡಳಿಯ ಅಂಕಿ-ಅಂಶಗಳು ತಿಳಿಸಿವೆ.

## ತಡೆಯದ ಹಸಿರು ಪಟಾಕಿ

**(1ನೇ ಪುಟದಿಂದ)** ಪ್ರಮಾಣ 169ರಷ್ಟಿತ್ತು. ಈ ವರ್ಷ ಅದು ಹಬ್ಬದ ದಿನಗಳಲ್ಲಿ 198ರವರೆಗೂ ತಲುಪಿದೆ ಎಂದು ಮಾಲಿನ್ಯ ನಿಯಂತ್ರಣ ಮಂಡಳಿಯ ಅಂಕಿ-ಅಂಶಗಳು ತಿಳಿಸಿವೆ. ಸರ್ಕಾರ ಕೊನೆ ಕ್ಷಣದಲ್ಲಿ ಹಸಿರು ಪಟಾಕಿ ಕಡ್ಡಾಯ ಎಂದು ಹೇಳಿತ್ತು. ಹಸಿರು ಪಟಾಕಿ ಎಂದರೆ ಏನೆಂಬುದೇ ಮಾರಾಟಗಾರರಿಗೆ ಹಾಗೂ ಜನರಿಗೆ ಅರ್ಥವಾಗಿರಲಿಲ್ಲ. ಅಧಿಕಾರಿಗಳ ಬಳಿಯೂ ಹಸಿರು ಪಟಾಕಿ ಹಾಗೂ ಸಾಮಾನ್ಯ ಪಟಾಕಿ ವ್ಯತ್ಯಾಸ ಪರೀಕ್ಷಿಸುವ ಸಮರ್ಪಕ ವ್ಯವಸ್ಥೆ ಇರಲಿಲ್ಲ.

## ಸಿದ್ದರಾಮಯ್ಯ ತೀವ್ರ ವಿರೋಧ

**(1ನೇ ಪುಟದಿಂದ)** ಪ್ರಾಮಾಣಿಕ ಕಾಳಜಿ ಹೊಂದಿದ್ದರೆ, ಈಗಾಗಲೇ ಅವರ ಮುಂದಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಒಪ್ಪಿಕೊಂಡು ಕಾರ್ಯಕ್ರಮಗಳನ್ನು ರೂಪಿಸಲಿ ಎಂದವರು ಹೇಳಿದ್ದಾರೆ.

ಲಿಂಗಾಯತ ಅಭಿವೃದ್ಧಿ ನಿಗಮ ಸ್ಥಾಪನೆಗೆ ನಮ್ಮ ವಿರೋಧ ಇಲ್ಲ. ಬಡತನ ಎಂಬುದು ಜಾತಿ-ಧರ್ಮಗಳನ್ನು ಮೀರಿದ್ದು. ಕೇವಲ ತಳಸಮುದಾಯಗಳಲ್ಲಿ ಮಾತ್ರವಲ್ಲ, ಮೇಲ್ಜಾತಿಗಳಲ್ಲಿಯೂ ಬಡವರಿದ್ದಾರೆ. ಎಲ್ಲ ಜಾತಿ-ಧರ್ಮಗಳ ಬಡವರ ಕಲ್ಯಾಣಕ್ಕಾಗಿ ರಾಜ್ಯ ಸರ್ಕಾರ ರೂಪಿಸುವ ಕಾರ್ಯಕ್ರಮಗಳನ್ನು ನಾನು ಸ್ವಾಗತಿಸುತ್ತೇನೆ. ಆದರೆ ಕೇವಲ ರಾಜಕೀಯ ಲಾಭಕ್ಕಾಗಿ ನಡೆಸುವ ಇಂತಹ ಕ್ಷುಲಕ ಬುದ್ಧಿಯ ಕಸರತ್ತುಗಳನ್ನು ಉಗ್ರವಾಗಿ ಖಂಡಿಸುತ್ತೇನೆ ಎಂದವರು ತಿಳಿಸಿದ್ದಾರೆ.

ಗಡಿಭಾಗದಲ್ಲಿ ಕನ್ನಡ ಮತ್ತು ಮರಾಠಿಗರ ನಡುವೆ ಆಗಾಗ ಸಂಘರ್ಷಗಳು ನಡೆದರೂ ರಾಜ್ಯದಾದ್ಯಂತ ಕನ್ನಡಿಗರು ಮತ್ತು ಮರಾಠಿಗರು ಪರಸ್ಪರ ಸೌಹಾರ್ದತೆಯಿಂದ ಬದುಕುತ್ತಿದ್ದಾರೆ. ಈಗ ಮರಾಠ ಅಭಿವೃದ್ಧಿ ಪ್ರಾಧಿಕಾರವನ್ನು ಘೋಷಿಸಿ ಅನಗತ್ಯವಾಗಿ ಕನ್ನಡಿಗರನ್ನು ಕೆರಳಿಸುವ ಮೂರ್ಖತನವನ್ನು ರಾಜ್ಯ ಸರ್ಕಾರ ಮಾಡಿದೆ. ಇದರಿಂದಾಗಿ ರಾಜ್ಯದ ಶಾಂತಿ-ಸುವ್ಯವಸ್ಥೆಗೆ ಭಂಗ ಉಂಟಾದಲ್ಲಿ ಅದಕ್ಕೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರೇ ಹೊಣೆಯಾಗುತ್ತಾರೆ ಎಂದವರು ಎಚ್ಚರಿಸಿದ್ದಾರೆ.

## ಹರಪನಹಳ್ಳಿಗೆ ಇಂದು ಸಂಸದ ಜಿ.ಎಂ. ಸಿದ್ದೇಶ್ವರ

ದಾವಣಗೆರೆ ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಇಂದು ಬೆಳಿಗ್ಗೆ 11.30ಕ್ಕೆ ಹರಪನ ಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆಯಲ್ಲಿ ಭಾಗವಹಿಸುವರು.

## ಕಸಾಪದಿಂದ ಇಂದು ನುಡಿ ಹಬ್ಬ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಅಂತರ್ಜಾಲದ ಮೂಲಕ ನಡೆಯುತ್ತಿರುವ ಕನ್ನಡ ನುಡಿ ಹಬ್ಬದಲ್ಲಿ ಇಂದು ಸಂಜೆ 6 ರಿಂದ 7ರವರೆಗೆ 'ದೃಶ್ಯ ಮಾಧ್ಯಮ ಮತ್ತು ಸಮಾಜ' ವಿಷಯ ಕುರಿತು ನ್ಯಾಯವಾದಿ ರೇವಣ್ಣ ಬಳ್ಳಾರಿ ಅವರು ಮಾತನಾಡುವರು. ಆಸಕ್ತರು youtube channel links : Davanagere Taluk ka.sa.pa kannada Nudi_habba2020, web site : http://www.youtube.com/channel/ucjWzFm4YFnhAxce4UwjPsYg ಮುಖಾಂತರ ಕಾರ್ಯಕ್ರಮ ವೀಕ್ಷಿಸಬಹುದು.

## ಗ್ರಾಸಿಂನಲ್ಲಿ ಕೃತಕ ಕಾಲು ಜೋಡಣೆ

ಕುಮಾರಪಟ್ಟಂನ ಗ್ರಾಸಿಂ ಜನಸೇವಾ ಟ್ರಸ್ಟ್ ವತಿಯಿಂದ ದಿ. ಆದಿತ್ಯ ವಿಕ್ರಂ ಬಿರ್ಲಾ ಅವರ ಜನ್ಮ ದಿನದ ಅಂಗವಾಗಿ ಇಂದು ಉಚಿತವಾಗಿ ಕೃತಕ ಕಾಲು ಜೋಡಣೆ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ರೇಣುಕ ನಾಗನೂರ (99643 48288), ಮಂಜುನಾಥ (8722429612) ತಿಳಿಸಿದ್ದಾರೆ.

## ಹೊನ್ನಾಳಿಯಲ್ಲಿ ಸಹಕಾರ ಸಪ್ತಾಹ

'ಯುವಜನ, ಮಹಿಳಾ ಮತ್ತು ಅಬಲ ವರ್ಗದವರಿಗಾಗಿ ಸಹಕಾರ ಸಂಸ್ಥೆಗಳು' ಧ್ಯೇಯದಡಿಯಲ್ಲಿ 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವು ಟಿಎಪಿಸಿಎಂಎಸ್ ನಲ್ಲಿ ಇಂದುನಡೆಯಲಿದೆ.

### ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀ ಶಶಿಧರ ಎನ್.ಆರ್. ಬಿನ್ ಎನ್. ರುದ್ರಪ್ಪ, ವಾಸ : 2ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಶಿವಕುಮಾರಸ್ವಾಮಿ ಬಡಾವಣೆ, 1ನೇ ಹಂತ, ದಾವಣಗೆರೆ. ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮಾಲೀಕರಾಗಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತನ್ನು ಈ ಹಿಂದೆ ನನ್ನ ಕಕ್ಷಿದಾರರ ತಂದೆಯಾದ ಶ್ರೀ ಎನ್. ರುದ್ರಪ್ಪ ಬಿನ್ ಎನ್. ವೀರಪ್ಪ ಇವರು ದಿನಾಂಕ : 23.01.1991 ರಂದು ಎಸ್.ಆರ್. ನಂ. 5260/1990-91ರ ಕ್ರಯಪತ್ರದ ಮೂಲಕ ಖರೀದಿ ಮಾಡಿದ್ದು, ಸದರಿ ಮೂಲ ಕ್ರಯಪತ್ರವು ನನ್ನ ಕಕ್ಷಿದಾರರ ತಂದೆಯವರು ವಿದ್ಯಾನಗರ ಮುಖ್ಯರಸ್ತೆ ಶಿವ ಪಾರ್ವತಿ ದೇವಸ್ಥಾನ ಹತ್ತಿರ ಜೆರಾಕ್ಸ್ ಮಾಡಿಸಲು ಹೋದಂತಹ ಸಂದರ್ಭದಲ್ಲಿ ದಿನಾಂಕ : 25.10.2020 ರಂದು ಆಕಸ್ಮಿಕವಾಗಿ ಕಳೆದುಹೋಗಿರುತ್ತದೆ. ಸದರಿ ಅಸಲು ಕ್ರಯಪತ್ರವು ಯಾರಿಗಾದರೂ ಸಿಕ್ಕಲ್ಲಿ ಮೇಲ್ಕಂಡ ನಮ್ಮ ಕಕ್ಷಿದಾರರನ್ನಾಗಲೀ ಅಥವಾ ಕೆಳಕಂಡ ವಕೀಲರನ್ನಾಗಲೀ ಸಂಪರ್ಕಿಸಿ ಅದನ್ನು ತಲುಪಿಸಬೇಕಾಗಿ ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಕಟಿಸಲಾಗಿದೆ.

ಷೆಡ್ಯೂಲ್ : ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿಟುವಳ್ಳಿ ವಿಭಾಗದಲ್ಲಿ ಬರುವ ಸೈಟ್ ನಂ. 13, # 859/13, ವಿಸ್ತೀರ್ಣ 30x40 ಸ್ವತ್ತಿಗೆ ಚಕ್ಕುಬಂದಿ. ಪೂರ್ವ : ಸೈಟ್ ನಂ. 14, ಪಶ್ಚಿಮ : ಸೈಟ್ ನಂ. 12, ಉತ್ತರ : ಬೇರೆಯವರ ಲೇಔಟ್, ದಕ್ಷಿಣ : 30 ರಸ್ತೆ, ಈ ಮಧ್ಯೆ ಇರುವ ಸ್ವತ್ತು.

**ಸಹಿ/- (ಎ.ಎಂ. ಹೆಗಡೆ) ವಕೀಲರು**
**ಬಿ.ಕಾಂ. ಎಲ್.ಎಲ್.ಬಿ., (ಕೆಎಆರ್651/1984)**
**'ಅನುಗ್ರಹ', #612/1, 7ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಮೊ. : 94483 05888**
ಸಂಪರ್ಕಿಸಬೇಕಾದ ವಿಳಾಸ : ಎ.ಎಂ. ಹೆಗಡೆ, ವಕೀಲರು, # 82/18, ಪಿ.ಬಿ. ರಸ್ತೆ, ಇಂಡಿಯನ್ ಬ್ಯಾಂಕ್ ಹತ್ತಿರ, ದಾವಣಗೆರೆ. **ಮೊ. : 94483 05888**

### ಸಾರ್ವಜನಿಕ ಪ್ರಕಟಣೆ

ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಲಾದ ಸ್ವತ್ತನ್ನು **ಡಾ.ಬಿ.ಹೆಚ್ ನಿರಂಜನ್**, ಎಂ.ಸಿ.ಸಿ.'ಬಿ' ಬ್ಲಾಕ್, ದಾವಣಗೆರೆ, ಆದ ನಾನು **ಶ್ರೀಮತಿ, ಎನ್ . ನಂದಿನಿ ಕೋಂ ಆರ್.ನಾಗನ ಗೌಡ** ಇವರಿಂದ ಶುದ್ಧ ಕ್ರಯಕ್ಕೆ ಪಡೆದು ದಾವಣಗೆರೆ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ 1ನೇ ಪುಸ್ತಕದ ದಸ್ತಾವೇಜು **ನಂ. 4235/2020-21 ದಿನಾಂಕ : 30.07.2020** ರಂದು ನನ್ನ ಹೆಸರಿಗೆ ಕ್ರಯ ಮಾಡಿಸಿಕೊಂಡಿರುತ್ತೇನೆ. ಕ್ರಯ ಪತ್ರದ ದಾಖಲೆಯ ಮೇರೆಗೆ ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ನನ್ನ ಹೆಸರಿಗೆ **ದಿನಾಂಕ: 29.09.2020** ರಂದು ಖಾತೆ ವರ್ಗಾವಣೆಯಾಗಿರುತ್ತದೆ. ಸದರಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ವ್ಯಕ್ತಿಗೆ ಯಾವುದೇ ರೀತಿಯ ಹಕ್ಕು ಮತ್ತು ಹಿತಾಸಕ್ತಿ ಇದ್ದಲ್ಲಿ **ಈ ಪ್ರಕಟಣೆ ಪ್ರಕಟಗೊಂಡ 7 ದಿನಗಳ ಒಳಗಾಗಿ ಷೆಡ್ಯೂಲ್ ಸ್ವತ್ತಿನ ಸಂಬಂಧ ಪಟ್ಟ ದಾಖಲೆಗಳೊಂದಿಗೆ ನನ್ನನ್ನು ಸಂಪರ್ಕಿಸತಕ್ಕದ್ದು,** ಆ ನಂತರ ಬಂದ ಯಾವುದೇ ರೀತಿಯ ದೂರುಗಳು ಹಾಗೂ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

**ಷೆಡ್ಯೂಲ್ ವಿವರ:**

ದಾವಣಗೆರೆ ಸಿಟಿ ದಾವಣಗೆರೆ ತಾಲ್ಲೂಕು 5ನೇ ವಾರ್ಡ್, 10ನೇ ಡಿವಿಜನ್‌ಗೆ, ಸೇರಿದ ಈ ಹಿಂದೆ ದಾವಣಗೆರೆ ಹರಿಹರ ಸಿಟಿ, ಹೊಸ ವಾರ್ಡ್ ನಂ: 28, ನಗರಾಭಿವೃದ್ಧಿ ಪ್ರಾಧಿಕಾರದವರು ವಿಂಗಡಿಸಿರುವ **ಶ್ರೀ ಎಸ್.ನಿಜಲಿಂಗಪ್ಪ ಬಡಾವಣೆಯಲ್ಲಿ** ಬರತಕ್ಕ ಸೈಟುಗಳ ಪೈಕಿ **ಸೈಟ್ ನಂ 1160** ಇದರ ಮಹಾನಗರ ಪಾಲಿಕೆಯ **ಚಾಲ್ತಿ ಡೋರ್ ನಂ: 1160** ಇದರ ಅಳತೆ : 9.143 X 12.171 ಮೀಟರ್ = 111.46 ಚದುರ ಮೀಟರ್ ಇದ್ದು ಪೂರ್ವ-ಪಶ್ಚಿಮ : 30 ಅಡಿಗಳು ಉತ್ತರಕ್ಕೆ- ದಕ್ಷಿಣಕ್ಕೆ : 40 ಅಡಿಗಳು ಉಳ್ಳ ನಿವೇಶನಕ್ಕೆ ಚಕ್ಕುಬಂದಿ:

**ಪೂರ್ವಕ್ಕೆ:- ಸೈಟ್ ನಂ 1161**
**ಪಶ್ಚಿಮಕ್ಕೆ:- ಸೈಟ್ ನಂ 1159**
**ಉತ್ತರಕ್ಕೆ:- ಸೈಟ್ ನಂ 1149**
**ದಕ್ಷಿಣಕ್ಕೆ:- ರಸ್ತೆ,**

ಡಾ. ಬಿ.ಹೆಚ್. ನಿರಂಜನ್
ಎಂ.ಸಿ.ಸಿ.'ಬಿ' ಬ್ಲಾಕ್, ದಾವಣಗೆರೆ.
**99022 50770**


**ಪ್ರವೇಶ ಪ್ರಕಟಣೆ 2020-21**
ಎಸ್. ಎಸ್.ಎಲ್.ಸಿ./ಪಿ.ಯು.ಸಿ./ ಐಟಿಐ ಪಾಸ್/ ಫೇಲ್ ನಂತರ ಮುಂದೇನು?
**ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ**
ವಿದ್ಯಾರ್ಹತೆ: ಎಸ್. ಎಸ್.ಎಲ್.ಸಿ./ಪಿ.ಯು.ಸಿ./ ಐಟಿಐ ಪಾಸ್/ಫೇಲ್
6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂ ಮತ್ತು ಅರೆ ಸರ್ಕಾರಿ ಆಸ್ಪತ್ರೆಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
*ಯಶಸ್ವಿ 15 ನೇ ವರ್ಷದಲ್ಲಿ*
**ಮಾನಸ ಕಮ್ಯೂನಿಟಿ ಕಾಲೇಜ್ (ರಿ)**
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
**97402 58276 93533 49357**


### ಸಾರ್ವಜನಿಕ ಪ್ರಕಟಣೆ

**ಶ್ರೀಮತಿ ತೇಜಸ್ವಿನಿ ಕೋಂ ಕೆ.ಸಿ.ಶಿರಸಾಲಿ ಮಠ್** ಹಾಗೂ ಅವಳ ಮಕ್ಕಳು ಒಂದನೇ **ಗಣೇಶ್** ಹಾಗೂ ಎರಡನೇ **ನಟೇಶ್,** ಹಾಲಿ ಹದಡಿ ಗ್ರಾಮ ವಾಸಿಗಳ ಪರವಾಗಿ ಅಸಲು **ದಾವೆ 171/20** ರಲ್ಲಿ ದಾವೆಯನ್ನು ನಗರದ ಒಂದನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಹೂಡಿದ್ದು **ಶ್ರೀಮತಿ ವಿಜಯಲಕ್ಷ್ಮಿ ಡೋರ್ ನಂ 89, 8ನೇ ಮುಖ್ಯ ರಸ್ತೆ, 13ನೇ ತಿರುವು, ವಿಲ್ಸನ್ ಗಾರ್ಡನ್, ಬೆಂಗಳೂರು** ಇವರ ಮೇಲೆ ಷೆಡ್ಯೂಲ್ ಆಸ್ತಿಯ ಬಗ್ಗೆ ಘೋಷಣೆ ಮಾಡಲು 10.03.2020 ರಂದು ಆಕೆ ಪಡೆದ ದಾನ ಪತ್ರ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆಯನ್ನು ಕೋರಿ ಸಲ್ಲಿಸಿರುವ ದಾವೆ ಚಾಲ್ತಿಯಲ್ಲಿರುತ್ತದೆ. ಈ ಮಧ್ಯೆ ದಾವಾ ಹಾಕಿರುವ ವಿಷಯವನ್ನು ತಿಳಿದು ಕೊಂಡು ಸದರಿ ವಿಜಯಲಕ್ಷ್ಮೀಯವರು ಷೆಡ್ಯೂಲ್ ಆಸ್ತಿಗಳನ್ನು ಮಾರಾಟ ಮಾಡುವ ತರದೂದಿಯಲ್ಲಿರುತ್ತಾರೆ. ಕಾರಣ ಈ ಪ್ರಕಟಣೆ, ಸಾರ್ವಜನಿಕರು ಸದರಿ ವಿಜಯಲಕ್ಷ್ಮೀಯವರೊಂದಿಗೆ ಯಾವ ತೆರೆನಾದ ವ್ಯವಹಾರವನ್ನು ಷೆಡ್ಯೂಲ ಆಸ್ತಿಗಳ ಬಗ್ಗೆ ಮಾಡಬಾರದಾಗಿ ಈ ಮೂಲಕ ತಿಳಿಸುತ್ತಾರೆ, ಒಂದು ವೇಳೆ ಈ ಪ್ರಕಟಣೆಯನ್ನು ಅಕಾಲಿಸಿ ವ್ಯವಹಾರಿಸಿದಲ್ಲಿ ಖರೀದಿಸುವವರಿಗೆ ಯಾವ ಹಕ್ಕು ಪ್ರಾಪ್ತವಾಗುವುದಿಲ್ಲ ತಿಳಿಯಿರಿ.

**ಷೆಡ್ಯೂಲ್**

1) ರಿ.ಸರ್ವೆ ನಂ. 95/3 ವಿಸ್ತೀರ್ಣ 1 ಎಕರೆ - 24 ಗುಂಟೆಗಳು
2) ರಿ.ಸರ್ವೆ ನಂ. 98/1 ವಿಸ್ತೀರ್ಣ 0-18 ಗುಂಟೆಗಳು
3) ರಿ.ಸರ್ವೆ ನಂ. 121/1 ವಿಸ್ತೀರ್ಣ 0-33 ಗುಂಟೆಗಳು
4) ರಿ.ಸರ್ವೆ, ನಂ 122/1 ವಿಸ್ತೀರ್ಣ $0\text{-}26^{1/2}$ ಗುಂಟೆಗಳು
5) ಖಾ.ನಂ 35/P ರಲ್ಲಿರುವ ಮನೆ ಮತ್ತು ಖಾಲಿ ಜಾಗ ವಿಸ್ತೀರ್ಣ 46x66 ಅಡಿಗಳು

ಮೇಲ್ಕಂಡ ಎಲ್ಲಾ ಆಸ್ತಿಗಳು ದಾವಣಗೆರೆ ತಾಲ್ಲೂಕು ಹದಡಿ ಗ್ರಾಮದಲ್ಲಿರುತ್ತವೆ.

ಸಹಿ/-
ತೇಜಸ್ವಿನಿ

**ಜಗದೀಶ್ ಹಿರೇಮಠ್, ವಕೀಲರು**
2 ನೇ ಮೇನ್, 2ನೇ ಕ್ರಾಸ್,
ಕೆ.ಬಿ. ಬಡಾವಣೆ, ದಾವಣಗೆರೆ-2
**ಮೊ: 98441 88770**

# ಎಸ್ಸಿ-ಎಸ್ಟಿ ಮೀಸಲು ಹೆಚ್ಚಳ : ಸಚಿವ ಸಂಪುಟದ ಉಪಸಮಿತಿ ರಚನೆ

## ಸರ್ಕಾರದ ಕ್ರಮವನ್ನು ಸ್ವಾಗತಿಸಿದ ರಾಜನಹಳ್ಳಿ ಸ್ವಾಮೀಜಿ



ಮಲೇಬೆನ್ನೂರು, ನ.18- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲು ಪ್ರಮಾಣ ಹೆಚ್ಚಳ ಮಾಡುವ ಬಗ್ಗೆ ಚರ್ಚಿಸಿ ವರದಿ ನೀಡಲು ಸಚಿವ ಸಂಪುಟದ ಉಪ ಸಮಿತಿ ರಚನೆ ಮಾಡಲು ನಿರ್ಧರಿಸಿರುವ ಸರ್ಕಾರದ ಕ್ರಮವನ್ನು ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಸ್ವಾಗತಿಸಿದ್ದಾರೆ.

ಮುಖ್ಯಮಂತ್ರಿ ಯಡಿಯೂರಪ್ಪನವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಸಚಿವ ಸಂಪುಟದ ಸಭೆಯಲ್ಲಿ ಎಸ್ಸಿ-ಎಸ್ಟಿ ಮೀಸಲು ಪ್ರಮಾಣವನ್ನು ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಿಸುವ ಬಗ್ಗೆ ನಡೆಯುತ್ತಿರುವ ಹೋರಾಟಗಳು ಹಾಗೂ ಅಧ್ಯಯನ ವರದಿ ಸಲ್ಲಿಕೆ ಆಗಿರುವ ಬಗ್ಗೆ ಸುದೀರ್ಘ ಚರ್ಚೆ ನಡೆಸಿ, ಈ ಬಗ್ಗೆ ಚರ್ಚಿಸಿ ವರದಿ ನೀಡುವಂತೆ ಸಚಿವ ಸಂಪುಟದ ಉಪಸಮಿತಿ ರಚಿಸಲು ತೀರ್ಮಾನಿಸಿರುವುದು ನಮ್ಮ ಹೋರಾಟಕ್ಕೆ ಸಿಕ್ಕ ಪ್ರತಿಫಲವಾಗಿದೆ. ಅದಕ್ಕಾಗಿ ಮುಖ್ಯಮಂತ್ರಿ ಯಡಿಯೂರಪ್ಪ, ಸಮಾಜ ಕಲ್ಯಾಣ ಸಚಿವ ಶ್ರೀರಾಮುಲು ಹಾಗೂ ಸಂಪುಟದ ಎಲ್ಲಾ ಸಚಿವರನ್ನು, ಸಮಾಜದ ಶಾಸಕರನ್ನು ಸಂಸದರನ್ನು ಅಭಿನಂದಿಸಿದ್ದೇನೆ ಎಂದರು.

ಮೀಸಲು ಪ್ರಮಾಣವನ್ನು ಹೆಚ್ಚಿಸುವಂತೆ ನಾವು ನಡೆಸಿದ ಪಾದಯಾತ್ರೆ ಹಾಗೂ ಹೋರಾಟಗಳ ಹಿನ್ನೆಲೆಯಲ್ಲಿ ಈ ಹಿಂದಿನ ಸಮ್ಮಿಶ್ರ ಸರ್ಕಾರ ನಿವೃತ್ತ ನ್ಯಾಯಮೂರ್ತಿ ಡಾ. ನಾಗಮೋಹನ್ ದಾಸ್ ಅವರ ಅಧ್ಯಕ್ಷತೆಯಲ್ಲಿ ಆಯೋಗ ರಚಿಸಿತ್ತು. ನಂತರ ಬಂದ ಬಿಜೆಪಿ ಸರ್ಕಾರವು ಅದೇ ಆಯೋಗಕ್ಕೆ ವರದಿ ನೀಡುವಂತೆ ಕೇಳಿತ್ತು. ಆ ಪ್ರಕಾರ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ಆಯೋಗವು ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು.

ವರದಿ ಜಾರಿಗೊಳಿಸುವಂತೆ ನಾವು 2-3 ಬಾರಿ ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಮನವಿ ಮಾಡಿದ್ದೆವು. ಅಲ್ಲದೇ ಕಳೆದ ತಿಂಗಳು ಸತ್ಯಾಗ್ರಹ ಕೈಗೊಂಡಿದ್ದಾಗ ಸಚಿವರು, ಶಾಸಕರು ನಮ್ಮನ್ನು ಭೇಟಿ ಮಾಡಿ, ಮೀಸಲು ಪ್ರಮಾಣ ಹೆಚ್ಚಿಸಲು ಸರ್ಕಾರ ಬದ್ಧವಾಗಿದೆ. ಧರಣಿ ಕೈಬಿಡುವಂತೆ ಮನವಿ ಮಾಡಿದ್ದರು. ಆ ಪ್ರಕಾರ ಸರ್ಕಾರ ಇಂದು ಸಂಪುಟದ ಉಪಸಮಿತಿ ರಚನೆ ಮಾಡಲು ತೀರ್ಮಾನಿಸಿದೆ. ಆದಷ್ಟು ಬೇಗ ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳುವಂತೆ ಶ್ರೀಗಳು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.



## ನಗರದಲ್ಲಿ ಇಂದು ಇಂದಿರಾ ಗಾಂಧಿ ಜನ್ಮ ದಿನಾಚರಣೆ

ಜಿಲ್ಲಾ ಕಾಂಗ್ರೆಸ್ ವತಿಯಿಂದ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಇಂದು ಆಚರಿಸಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.ಇಂದು ಬೆಳಗ್ಗೆ 11ಕ್ಕೆ ಜಿಲ್ಲಾ ಕಾಂಗ್ರೆಸ್ ಕಛೇರಿಯ ಎಸ್ಸೆಸ್ ಭವನದಲ್ಲಿ ಜಿಲ್ಲಾಧ್ಯಕ್ಷ ಹೆಚ್.ಬಿ.ಮಂಜಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಕೆಪಿಸಿಸಿ ಪ್ರಿಯದರ್ಶಿನಿ ವಿಭಾಗದ ಅಧ್ಯಕ್ಷರಾದ ಭವ್ಯ ನರಸಿಂಹ ಮೂರ್ತಿ ಆಗಮಿಸಲಿದ್ದಾರೆ.

# ಕೃಷಿ ಇಲಾಖೆ ನೇಮಕಾತಿ ನಿಯಮಗಳಿಗೆ ಬದಲಾವಣೆ

ಬೆಂಗಳೂರು, ನ. 18 - ಕೃಷಿ ಇಲಾಖೆಯಲ್ಲಿ ಕರ್ನಾಟಕ ಕೃಷಿ ಸೇವೆಗಳು (ನೇಮಕಾತಿ) ನಿಯಮಗಳು, 1999ಕ್ಕೆ ತಿದ್ದುಪಡಿ ಮಾಡಿ, ಕೆಲವು ಬದಲಾವಣೆಗಳಿಗೆ ರಾಜ್ಯ ಸಚಿವ ಸಂಪುಟ ಅನುಮತಿ ನೀಡಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ. ಕಾನೂನು ಸಚಿವ ಮಾಧುಸ್ವಾಮಿ, 2014ರಲ್ಲಿ ಕೆಲವೊಂದು ತಿದ್ದುಪಡಿಗಳನ್ನು ಮಾಡಲಾಗಿದೆ ಎಂದರು.

ಕಳೆದ 20 ವರ್ಷಗಳಿಂದ ಕೃಷಿ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ಸಮಗ್ರ ಪರಿಷ್ಕರಣೆ ಮಾಡಿರುವುದಿಲ್ಲ. ಪ್ರಸ್ತುತ ಅವಧಿಯಲ್ಲಿ ಸಮಗ್ರ ಪರಿಷ್ಕರಣೆ ಮಾಡಿ ಜಾರಿಗೆ ತರಲಾಗಿದೆ. ಕೃಷಿ ಆಯುಕ್ತರು ಹಾಗೂ ಜಲಾನಯನ ಅಭಿವೃದ್ಧಿ ಆಯುಕ್ತರು, ಈ ಹುದ್ದೆಗಳನ್ನು ಸೇರಿಸಲಾಗಿದೆ.

ಸಹಾಯಕ ಕೃಷಿ ನಿರ್ದೇಶಕರು ವೃಂದದ ನೇರ ನೇಮಕಾತಿ ಮತ್ತು ಮುಂಬಡ್ತಿ ಅನುಪಾತವನ್ನು 30:70 ಬದಲಾಗಿ 20:80 ರಂತೆ ನಿಗದಿಪಡಿಸಲಾಗಿದೆ. ಸಹಾಯಕ ಕೃಷಿ ನಿರ್ದೇಶಕ, ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ವೃಂದಗಳ ನೇರ ನೇಮಕಾತಿಯನ್ನು ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡಲು ತೀರ್ಮಾನಿಸಲಾಗಿದೆ.

ಕೃಷಿ ಅಧಿಕಾರಿ ವೃಂದದ ನೇರ ನೇಮಕಾತಿ ಮತ್ತು ಮುಂಬಡ್ತಿ ಅನುಪಾತವನ್ನು 50:50 ರಂತೆ ನಿಗದಿಪಡಿಸಲಾಗಿದ್ದು, ಶೇ. 50ರಲ್ಲಿ ನೇರ ನೇಮಕಾತಿಯಲ್ಲಿ ಶೇ. 85ರಷ್ಟು ಕೃಷಿ ಪದವೀಧರರಿಗೆ, ಶೇ. 15ರಷ್ಟು ಬಿ.ಟೆಕ್ (ಕೃಷಿ ಇಂಜಿನಿಯರಿಂಗ್) / ಬಿ.ಟೆಕ್ (ಆಹಾರ ತಂತ್ರಜ್ಞಾನ / ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ) ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗಿದೆ. ಕೃಷಿ ಪದವಿ ಹೊಂದಿಲ್ಲದ ಸಹಾಯಕ ಕೃಷಿ ಅಧಿಕಾರಿಗಳು ಇಲಾಖೆಯಲ್ಲಿ ಕಳೆದ 30-35 ವರ್ಷಗಳಿಂದ ಸೇವೆ ಸಲ್ಲಿಸಿದ್ದು, ಅವರಿಗೆ ಕೃಷಿ ಅಧಿಕಾರಿಯಾಗಿ ಒಂದು ಬಾರಿಗೆ ಮುಂಬಡ್ತಿ ನೀಡಲು ತೀರ್ಮಾನಿಸಲಾಗಿದೆ.

ನಿಯಮಾವಳಿಗೆ ತಿದ್ದುಪಡಿ ತರುವ ಮೂಲಕ ಇಲಾಖೆಯ ಕೆಳಹಂತದ ಅಧಿಕಾರಿಗಳಾದ ಸಹಾಯಕ ಕೃಷಿ ಅಧಿಕಾರಿಗಳನ್ನು ಶೇ. 100ರಷ್ಟು ನೇರ ನೇಮಕಾತಿಯಿಂದ ಭರ್ತಿ ಮಾಡಲು ಉದ್ದೇಶಿಸಲಾಗಿದೆ. ಆ ಮೂಲಕ ಈ ನೇಮಕಾತಿಯಲ್ಲಿ ಶೇ. 85ರಷ್ಟು ಕೃಷಿ ಪದವೀಧರರಿಗೆ, ಶೇ. 15ರಷ್ಟು ಬಿ.ಟೆಕ್ (ಕೃಷಿ ಇಂಜಿನಿಯರಿಂಗ್) / ಬಿ.ಟೆಕ್ (ಆಹಾರ ತಂತ್ರಜ್ಞಾನ / ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ) ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗಿದೆ ಎಂದರು.

# ಕಟಾವು ಯಂತ್ರಕ್ಕೆ ಅಧಿಕ ಹಣ : ಕ್ರಮಕ್ಕೆ ಆಗ್ರಹ



ಹೊನ್ನಾಳಿ, ನ.18- ಭತ್ತದ ಕಟಾವು ಕಾರ್ಯ ಜಿಲ್ಲೆಯಾದ್ಯಂತ ಆರಂಭವಾಗಿದ್ದು, ಭತ್ತ ಕಟಾವು ಯಂತ್ರಗಳ ಮಾಲೀಕರು ರೈತರಿಂದ ಅಧಿಕ ಹಣ ಪಡೆದುಕೊಳ್ಳುತ್ತಿದ್ದಾರೆ ಎಂದು ಮಾಜಿ ಶಾಸಕ ಡಿ.ಜಿ. ಶಾಂತನಗೌಡ ಆರೋಪಿಸಿದ್ದಾರೆ.

ಜಿಲ್ಲಾಧಿಕಾರಿಗಳು ನಿಗದಿಪಡಿಸಿರುವ ದರದಲ್ಲಿ ಎಲ್ಲಿಯೂ ಭತ್ತದ ಕಟಾವು ಕಾರ್ಯ ಆಗುತ್ತಿಲ್ಲ. ಜಿಲ್ಲಾಡಳಿತ ಪ್ರತಿ ಎಕರೆ ಭತ್ತ ಕಟಾವಿಗೆ 1,500 ರೂ.ಗಳನ್ನು ಮಾತ್ರ ರೈತರಿಂದ ಪಡೆದುಕೊಳ್ಳಬೇಕು ಎಂಬ ಆದೇಶ ಹೊರಡಿಸಿದೆ. ಆದರೆ, ವಾಸ್ತವವಾಗಿ ರೈತರಿಂದ 2,500 ರೂ. ಹಣ ಪಡೆಯಲಾಗುತ್ತಿದೆ. ಟೈರ್ ಯಂತ್ರಗಳಾದರೆ ಪ್ರತಿ ಎಕರೆಗೆ 2,000-2,200 ರೂ. ಹಾಗೂ ಚೈನ್ ಯಂತ್ರಗಳಾದರೆ ಪ್ರತಿ ಎಕರೆಗೆ 2,200 -2,500 ರೂ. ಗಳವರೆಗೂ ಡಿಮ್ಯಾಂಡ್ ಮಾಡಲಾಗುತ್ತಿದೆ.

ಮೆಕ್ಕೆಜೋಳ ಒಡೆಯುವ ಯಂತ್ರಕ್ಕೂ ಹೆಚ್ಚಿನ ಬಾಡಿಗೆ ವಸೂಲಿ ಮಾಡಲಾಗುತ್ತಿದೆ. ಮೆಕ್ಕೆಜೋಳ ಒಡೆಯಲು ಜಿಲ್ಲಾಡಳಿತ 1,000-1,200 ರೂ. ನಿಗದಿಪಡಿಸಿದೆ. ಆದರೆ, ರೈತರಿಂದ 1,500-1,800 ರೂ.ಗಳಷ್ಟು ಹಣ ಪಡೆದುಕೊಳ್ಳಲಾಗುತ್ತಿದೆ. ಅಷ್ಟು ಅಧಿಕ ಹಣ ನೀಡಲಾಗದೇ ರೈತರು ಕಂಗಾಲಾಗಿದ್ದಾರೆ. ಮೆಕ್ಕೆಜೋಳದ ಬೆಲೆ ತೀವ್ರವಾಗಿ ಕುಸಿದಿದೆ. ಸರಕಾರ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಮೆಕ್ಕೆಜೋಳ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಬೇಕು. ಭತ್ತದ ಬೆಲೆ ಕೂಡ ಅತಿ ಕಡಿಮೆ ಇದೆ. ಕ್ವಿಂಟಾಲ್‌ಗೆ 1,300-1,800 ರೂ.ಗಳಷ್ಟು ಇದೆ. ಇದರಿಂದ ರೈತರಿಗೆ ತೀವ್ರ ನಷ್ಟವಾಗುತ್ತಿದೆ.

ಅಧಿಕ ಬೆಲೆಯ ಬಿತ್ತನೆ ಬೀಜ, ಗೊಬ್ಬರ, ಕಳೆ-ಕೀಟನಾಶಕ ಹಾಕಿ ಬೆಳೆ ತೆಗೆದ ರೈತನಿಗೆ ಕಡಿಮೆ ಬೆಲೆ ದೊರೆಯುತ್ತಿದ್ದು, ಖರ್ಚು ಮಾಡಿದಷ್ಟು ಹಣವೂ ವಾಪಸ್ ಬಾರದಂತಾಗಿದೆ. ಸರಕಾರ ಗಮನ ಹರಿಸಿ ಕ್ರಮ ಜರುಗಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

## 22ರಂದು ಎಐಟಿಯುಸಿ ಶತಮಾನೋತ್ಸವ

ದಾವಣಗೆರೆ, ನ.18- ಭಾರತದ ಕಾರ್ಮಿಕ ವರ್ಗದ ಸಂಘಟಿತ ಹೋರಾಟಕ್ಕೆ 100 ವರ್ಷದ ಸಂಭ್ರಮದ ಹಿನ್ನೆಲೆಯಲ್ಲಿ ಎಐಟಿಯುಸಿ ಜಿಲ್ಲಾ ಸಮಿತಿಯಿಂದ ಶತಮಾನೋತ್ಸವ ಸಂಭ್ರಮಾಚರಣೆಯನ್ನು ಇದೇ ದಿನಾಂಕ 22ರಂದು ಬೆಳಿಗ್ಗೆ 10.30ಕ್ಕೆ ನಗರದಲ್ಲಿ ಏರ್ಪಡಿಸಲಾಗಿದೆ.

ಸಂಘಟನೆಯ ಜಿಲ್ಲಾ ಖಜಾಂಚಿ ಆನಂದರಾಜ್ ಎಐಟಿಯುಸಿ ಧ್ವಜಾರೋಹಣ ನೆರವೇರಿಸಲಿದ್ದಾರೆ. ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಡಿ.ಎ. ವಿಜಯಭಾಸ್ಕರ್ ಕಾರ್ಯಕ್ರಮ ಉದ್ಘಾಟಿಸುವರು ಎಂದು ಎಐಟಿಯುಸಿ ಜಿಲ್ಲಾಧ್ಯಕ್ಷ ಹೆಚ್.ಕೆ. ರಾಮಚಂದ್ರಪ್ಪ ತಿಳಿಸಿದ್ದಾರೆ.

ಸಂಘಟನೆಯ ಆನಂದರಾಜ್, ಆವರಗೆರೆ ಚಂದ್ರು, ಹೆಚ್.ಜಿ.ಉಮೇಶ್, ಐರಣಿ ಚಂದ್ರು, ಆವರಗೆರೆ ವಾಸು ಪತ್ರಿಕಾಗೋಷ್ಠಿಯಲ್ಲಿದ್ದರು.

## ನಗರಕ್ಕಿಂದು ಶಿಕ್ಷಣ ಸಚಿವ ಸುರೇಶ್



ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವ ಎಸ್. ಸುರೇಶ್‌ಕುಮಾರ್ ಅವರು ನಗರಕ್ಕೆ ಇಂದು ಆಗಮಿಸಲಿದ್ದಾರೆ.ಸಂಜೆ 5 ಗಂಟೆಗೆ ನಗರಕ್ಕಾಗಮಿ ಸಲಿರುವ ಸಚಿವರು, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯುವ 'ಸರ್ಕಾರದ ಎಲ್ಲಾ ಸೇವೆಗಳನ್ನು ಒಂದೇ ಸೂರಿನಡಿ ತರಲು ಬೆಂಗಳೂರು-1, ಕರ್ನಾಟಕ-1 ಮಾದರಿಯಲ್ಲಿ ಖಾಸಗಿ ಸಹಭಾಗಿತ್ವ ದೊಂದಿಗೆ ಪ್ರತಿ ಗ್ರಾಮದಲ್ಲಿ ಗ್ರಾಮ-1 ಕೇಂದ್ರಗಳ ಯೋಜನೆಯ ಅನುಷ್ಠಾನವನ್ನು ಪ್ರಾಯೋಗಿಕವಾಗಿ ದಾವಣಗೆರೆ ಜಿಲ್ಲೆಯ 100 ಗ್ರಾಮಗಳಲ್ಲಿ ಲೋಕಾರ್ಪಣೆ' ಮಾಡುವ ಕಾರ್ಯಕ್ರಮ ದಲ್ಲಿ ಪಾಲ್ಗೊಳ್ಳುವರು. ಸಂಜೆ 6 ಗಂಟೆಗೆ ದಾವಣಗೆರೆಯಿಂದ ನಿರ್ಗಮಿಸುವರು.

# ಜಿಲ್ಲೆಯಲ್ಲಿ 4 ರೈತ ಉತ್ಪಾದಕ ಸಂಸ್ಥೆಗಳ ರಚನೆ



ದಾವಣಗೆರೆ, ನ. 18- ಜಿಲ್ಲೆಯಲ್ಲಿ ಪ್ರಸಕ್ತ ವರ್ಷ ನಾಲ್ಕು ರೈತ ಉತ್ಪಾದಕ ಸಂಸ್ಥೆಗಳನ್ನು ರಚಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿಂದು ನಡೆದ ರೈತ ಉತ್ಪಾದಕ ಸಂಸ್ಥೆಗಳ ಸಮನ್ವಯ ಮತ್ತು ಮೇಲ್ವಿಚಾರಣಾ ಸಮಿತಿ ಸಭೆ ಹಾಗೂ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಕರ್ನಾಟಕ ರೈತ ಸುರಕ್ಷೆ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಅನುಷ್ಠಾನ ಕುರಿತ ಸಭೆಯಲ್ಲಿ ತೀರ್ಮಾನಿಸಲಾಯಿತು.

ದಾವಣಗೆರೆ ತಾಲ್ಲೂಕಿನಲ್ಲಿ ತೆಂಗು, ಹರಿಹರ ತಾಲ್ಲೂಕಿನಲ್ಲಿ ವೀಳ್ಯೆದೆಲೆ, ಹೊನ್ನಾಳಿ ತಾಲ್ಲೂಕಿನಲ್ಲಿ ಬಾಳೆ ಹಾಗೂ ತರಕಾರಿ ಮತ್ತು ನ್ಯಾಮತಿ ತಾಲ್ಲೂಕಿನಲ್ಲಿ ಶೇಂಗಾ ಬೆಳೆಯಲ್ಲಿ ಮೌಲ್ಯವರ್ಧನೆಗಾಗಿ ರೈತ ಉತ್ಪಾದಕ ಸಂಸ್ಥೆಗಳನ್ನು ರಚಿಸಲು ನಿರ್ಣಯಿಸಲಾಯಿತು.

ಇದೇ ವೇಳೆ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರು, ಹಿಂಗಾರು ಮತ್ತು ಬೇಸಿಗೆ ಬೆಳೆ ವಿಮೆ ಕುರಿತಂತೆ ಸಿದ್ಧಪಡಿಸಲಾದ ಕರಪತ್ರಗಳನ್ನು ಬಿಡುಗಡೆ ಮಾಡಿ, 2019-20ನೇ ಸಾಲಿನಲ್ಲಿ 25,734 ರೈತರು 385.98 ಲಕ್ಷ ರೂ. ಪ್ರೀಮಿಯಂ ಪಾವತಿಸಿ ನೋಂದಣಿ ಮಾಡಿಕೊಂಡಿದ್ದಾರೆ. 1536.14 ಲಕ್ಷ ರೂ. ಬೆಳೆ ವಿಮಾ ಮೊತ್ತ ರೈತರ ಖಾತೆಗಳಿಗೆ ಜಮಾವಣೆ ಮಾಡಿರುವುದಾಗಿ ತಿಳಿಸಿದರು.

ತೋಟಗಾರಿಕೆ ಬೆಳೆಗಳಲ್ಲಿ 6,563 ರೈತರು ಬೆಳೆ ವಿಮೆ ಮಾಡಿಸಿದ್ದು, ಒಟ್ಟು346.93 ಲಕ್ಷ ರೂ. ಪ್ರೀಮಿಯಂ ಮೊತ್ತ ಪಾವತಿಸಿದ್ದಾರೆ. 1257.42 ಲಕ್ಷ ರೂ. ಬೆಳೆ ವಿಮೆ ರೈತರ ಖಾತೆಗೆ ಜಮೆಯಾಗಿದೆ ಎಂದರು.

## ಮೆಳ್ಳೇಕಟ್ಟೆಯಲ್ಲಿ ನಾಳೆ ಮರುಳಸಿದ್ದೇಶ್ವರ ದೇವಸ್ಥಾನ ಉದ್ಘಾಟನೆ



ದಾವಣಗೆರೆ ತಾಲ್ಲೂಕಿನ ಮೆಳ್ಳೇಕಟ್ಟೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಮರುಳಸಿದ್ದೇಶ್ವರ, ಶ್ರೀ ಮಹಾಮಾಯಿ ದ್ಯಾಮಲಾಂಬ ಹಾಗೂ ಶ್ರೀ ಮಾರ್ಗದ ಬಸವೇಶ್ವರ ದೇವಸ್ಥಾನದ ಉದ್ಘಾಟನೆ, ಮೂರ್ತಿ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಸಮಾರಂಭವನ್ನು ನಾಳೆ ದಿನಾಂಕ 20 ರ ಶುಕ್ರವಾರ ಹಮ್ಮಿಕೊಳ್ಳಲಾಗಿದೆ. ಈ ಪ್ರಯುಕ್ತ ಇಂದು ಮತ್ತು ನಾಳೆ ಬೆಳಿಗ್ಗೆ 6 ರಿಂದ ಆದಿ ವಾಸಾದಿ ಪೂಜೆ, ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

## ಹರಿಹರ ಠಾಣೆ ಪಿಎಸ್‌ಐ ಆಗಿ ಸುನಿಲ್ ಬಸವರಾಜ್ ತೇಲಿ



ಹರಿಹರ, ನ.18- ಹರಿಹರ ನಗರ ಠಾಣೆಯ ಸಬ್ ಇನ್ ಸ್ಪೆಕ್ಟರ್ ಶ್ರೀಮತಿ ಶೈಲಶ್ರೀ ಅವರ ವರ್ಗಾವಣೆಯ ಬಳಿಕ ಖಾಲಿ ಉಳಿದಿದ್ದ ಆರಕ್ಷಕ ಉಪನಿರೀಕ್ಷಕ ಹುದ್ದೆಗೆ ಪ್ರಾಯೋಗಿಕ ತರಬೇತಿಯಲ್ಲಿದ್ದ ಸುನಿಲ್ ಬಸವರಾಜ್ ತೇಲಿ ಅವರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದ್ದು, ಅವರು ಇಂದು ಅಧಿಕಾರ ಸ್ವೀಕರಿಸಿದರು.

ಮೂಲತಃ ವಿಜಯಪುರದವರಾದ ಸುನಿಲ್ ಅವರು, ಮೆಕ್ಯಾನಿಕಲ್ ಇಂಜಿನಿಯರ್ ಆಗಿದ್ದು, ದಾವಣಗೆರೆಯ ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಾಯೋಗಿಕ ತರಬೇತಿ ಮುಗಿಸಿದ್ದಾರೆ.

ಈ ವೇಳೆ ಮಾತನಾಡಿದ ಅವರು, ನನ್ನ ಅವಧಿಯಲ್ಲಿ ಉತ್ತಮ ಕಾನೂನು-ಸುವ್ಯವಸ್ಥೆ ಕಾಪಾಡುವುದರ ಮುಖಾಂತರ ಜನಸ್ನೇಹಿ ಪೊಲೀಸ್ ಸೇವೆ ಅತಿ ಮುಖ್ಯವಾಗಿರುತ್ತದೆ. ಅಕ್ರಮ ಮದ್ಯ ಮಾರಾಟ, ಮಟ್ಕಾ, ಕ್ರಿಕೆಟ್ ಬೆಟ್ಟಿಂಗ್, ಅಪರಾಧ ಪ್ರಕರಣಗಳು ಹಾಗೂ ಬೈಕ್ ವ್ಹೀಲಿಂಗ್ ಮಾಡುವ ರೋಡ್ ರೋಮಿಯೋಗಳತ್ತ ಗಮನ ಹರಿಸಿ ಕ್ರಮ ಕೈಗೊಳ್ಳುವ ಮೂಲಕ, ಹರಿಹರ ಜಂಕ್ಷನ್ ಆಗಿರುವುದರಿಂದ ಹೆಚ್ಚು ವಾಹನಗಳ ದಟ್ಟಣೆ ಇರುತ್ತದೆ, ಸುಗಮ ಸಂಚಾರದ ಬಗ್ಗೆ ಗಮನಹರಿಸಿ ಕ್ರಮ ಜರುಗಿಸುತ್ತೇನೆ ಎಂದು ಹೇಳಿದರು.

# ವೀರಶೈವ ಸಭಾದ ಮಹಿಳಾ ಘಟಕ ಸಂಭ್ರಮ

## ವೀರಶೈವ-ಲಿಂಗಾಯತ ಅಭಿವೃದ್ಧಿ ನಿಗಮ ರಚನೆಗೆ ಸ್ವಾಗತ

ದಾವಣಗೆರೆ, ನ.18- ವೀರಶೈವ-ಲಿಂಗಾಯತ ಅಭಿವದ್ಧಿ ನಿಗಮ ರಚಿಸಿರುವ ರಾಜ್ಯ ಸರ್ಕಾರದ ಕ್ರಮ ಸ್ವಾಗತಿಸಿ, ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಮಹಿಳಾ ಘಟಕದ ವತಿಯಿಂದ ನಗರದಲ್ಲಿ ಇಂದು ಸಂಭ್ರಮಾಚರಿಸಲಾಯಿತು.

ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿ ಜಮಾಯಿಸಿದ್ದ ಮಹಿಳಾ ಕಾರ್ಯಕರ್ತೆಯರು, ಮುಖ್ಯಮಂತ್ರಿ ಯಡಿಯೂರಪ್ಪ, ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ ಅವರ ಭಾವಚಿತ್ರವುಳ್ಳ ಪೋಸ್ಟರ್ ಗಳನ್ನು ಹಿಡಿದು ಅವರುಗಳ ಪರವಾಗಿ ಜಯ ಘೋಷ ಹಾಕಿ ಸಿಹಿ ಹಂಚಿ ಸಂಭ್ರಮಿಸಿ, ಧನ್ಯವಾದ ಕೋರಿದರು.

ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ದೇವರಮನಿ ಶಿವಕುಮಾರ್, ನಗರ ಪಾಲಿಕೆ ಸದಸ್ಯರಾದ ಶಿವನಗೌಡ ಟಿ. ಪಾಟೀಲ, ಸ್ವಾಗಿ ಶಾಂತಕುಮಾರ್ ಮಾತನಾಡಿದರು.

ಈ ಸಂದರ್ಭದಲ್ಲಿ ಮಹಾಸಭಾದ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಉಮಾ ಎಂ.ಪಿ. ರಮೇಶ್, ಶಿವಕುಮಾರ್, ಮಹಿಳಾ ಪ್ರಧಾನ ಕಾರ್ಯದರ್ಶಿ ದ್ರಾಕ್ಷಾಯಣಿ, ರಾಷ್ಟ್ರೀಯ ಉಪಾಧ್ಯಕ್ಷರಾದ ವಿನುತ ರವಿ, ಶೋಭಾ ಕೊಟ್ರೇಶ್, ಅಶ್ವಿನಿ ಪ್ರಶಾಂತ್, ದ್ರಾಕ್ಷಾಯಣಿಯಮ್ಮ ಮಲ್ಲಿಕಾರ್ಜುನ್, ಮಂಜುಳಾ ಮಹೇಶ್, ನಾಗರಾತ್ನ, ರೂಪಾ ಗುರು, ಮಂಗಳಾ, ಸುನೀತಾ, ರೇಖಾ, ಸುಮಾ, ಜ್ಯೋತಿ ಬಸಪ್ಪ, ರಾಜೇಶ್ವರಿ ಉಮೇಶ್, ರತ್ನಾ ಮತ್ತಿತರರು ಭಾಗವಹಿಸಿದ್ದರು.

## ಪಾಲಿಕೆ ಸದಸ್ಯ ಸ್ವಾಗಿ ಶಾಂತಕುಮಾರ್ ಅವರಿಂದ ಕಾರ್ಮಿಕರಿಗೆ ಕೊಳಗ ವಿತರಣೆ



ದಾವಣಗೆರೆ, ನ.18- ನಗರ ಪಾಲಿಕೆಯ 18ನೇ ವಾರ್ಡಿನ ನಗರ ಪಾಲಿಕೆ ಸದಸ್ಯ ಸ್ವಾಗಿ ಶಾಂತಕುಮಾರ್ ಅವರು ತಮ್ಮ ವಾರ್ಡಿನ ಎಲ್ಲಾ ಪೌರ ಕಾರ್ಮಿಕರಿಗೆ ದೀಪಾವಳಿ ಹಬ್ಬದ ಕೊಡುಗೆಯಾಗಿ ಸ್ಟೀಲಿನ ಕೊಳಗ ವಿತರಿಸಿದರು. ಈ ಸಂದರ್ಭದಲ್ಲಿ ನಗರ ಪಾಲಿಕೆ ಸದಸ್ಯ ಎಲ್. ಡಿ.ಗೋಣೆಪ್ಪ, ಪಾಲಿಕೆ ಆರೋಗ್ಯ ವಿಭಾಗದ ನಿರೀಕ್ಷಕರಾದ ಮಧುಶ್ರೀ, ದಫೇದಾರ್ ಅರ್ಜುನ್ ಮತ್ತಿತರರು ಉಪಸ್ಥಿತರಿದ್ದರು.



## ಜಿಲ್ಲಾ ಕನ್ನಡ ಜಾಗೃತಿ ಸಮಿತಿಗೆ ಐವರ ನೇಮಕ

ದಾವಣಗೆರೆ,ನ.18- ಜಿಲ್ಲಾ ಕನ್ನಡ ಜಾಗೃತಿ ಸಮಿತಿಗೆ ಅಧಿಕಾರೇತರ ಸದಸ್ಯರನ್ನಾಗಿ ಎನ್.ಟಿ. ಯರ್ರಿಸ್ವಾಮಿ, ಪ್ರೊ. ಹೆಚ್.ಎ. ಭಿಕ್ಷಾವರ್ತಿಮಠ, ಎಸ್.ಎಸ್. ಸಿದ್ದರಾಜು, ದೇವಿಕ ಸುನಿಲ್, ಹೆಚ್.ಕೆ. ಸತ್ಯಭಾಮ ಮಂಜುನಾಥ್ ಅವರುಗಳನ್ನು ನೇಮಕ ಮಾಡಿ ಸರ್ಕಾರ ಆದೇಶಿಸಿದೆ.

# ಹರಪನಹಳ್ಳಿಯ ವಿದ್ಯಾರ್ಥಿ ನಿಲಯದಲ್ಲಿ ಪ್ರತಿ ವಿದ್ಯಾರ್ಥಿಗೂ ಪ್ರತ್ಯೇಕ ಲೋಟ, ತಟ್ಟೆ, ಸೋಪು



ಹರಪನಹಳ್ಳಿ, ನ. 18- ಪಟ್ಟಣದ ಪದವಿ ಕಾಲೇಜು ವಿದ್ಯಾರ್ಥಿಗಳು ವಸತಿ ನಿಲಯದಲ್ಲಿ ತಂಗಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಕೆ. ಭೀಮಪ್ಪ ಹೇಳಿದರು.

ಪಟ್ಟಣದ ದೇವರಾಜ ಅರಸು ಭವನದಲ್ಲಿ ವಸತಿ ನಿಲಯದ ಸಿಬ್ಬಂದಿಗಳಿಗೆ ಕೋವಿಡ್ ವೈರಾಣು ಪರೀಕ್ಷೆಯ ಗಂಟಲು ದ್ರವ ಸಂಗ್ರಹಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಒಟ್ಟು 8 ವಸತಿ ನಿಲಯಗಳು ಲಭ್ಯವಿದ್ದು, ಒಂದು ಕೋಣೆಯಲ್ಲಿ ಮೂರರಿಂದ ನಾಲ್ಕು ವಿದ್ಯಾರ್ಥಿಗಳು ಮಾತ್ರ ಉಳಿದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಪ್ರತಿಯೊಬ್ಬರಿಗೂ ಪ್ರತ್ಯೇಕ ಲೋಟ, ತಟ್ಟೆ, ಸೋಪು ಒದಗಿಸಲಾಗುವುದು. ವಿದ್ಯಾರ್ಥಿಗಳೇ ತಮ್ಮ ಲೋಟ, ತಟ್ಟೆ ಶುದ್ಧ ಮಾಡಿಕೊಂಡು ವೈಯಕ್ತಿಕ ಸ್ವಚ್ಛತೆಗೆ ಆದ್ಯತೆ ನೀಡುವಂತೆ ಸಲಹೆ ನೀಡಲಾಗುವುದು ಎಂದರು.

ವಸತಿ ನಿಲಯಕ್ಕೆ ಒಂದೇ ಪ್ರವೇಶ ದ್ವಾರವಿದ್ದು, ಒಳ ಪ್ರವೇಶಿಸುವಾಗ ಸ್ಯಾನಿಟೈಸರ್ ಹಾಗೂ ಥರ್ಮಲ್ ಸ್ಕ್ಯಾನಿಂಗ್ ಮಾಡಲಾಗುವುದು. ಪ್ರತಿ ವಿದ್ಯಾರ್ಥಿಯೂ ಕಾಲೇಜಿನಿಂದ ಹಾಗೂ ಪೋಷಕರಿಂದ ದೃಢೀಕರಣ ಪತ್ರ ನೀಡಿ ವಸತಿ ನಿಲಯಕ್ಕೆ ಪ್ರವೇಶ ಪಡೆಯಬೇಕು ಎಂದು ಭೀಮಪ್ಪ ಹೇಳಿದರು.

ನಿಲಯ ಪಾಲಕ ಚಂದ್ರಪ್ಪ ಮಾತನಾಡಿ, 40 ಸಿಬ್ಬಂದಿಗಳ ಹಾಗೂ 64 ವಿದ್ಯಾರ್ಥಿಗಳ ಕೋವಿಡ್ ವೈರಾಣು ಪರೀಕ್ಷೆಗೆ ಗಂಟಲು ದ್ರವ ಸಂಗ್ರಹ ಮಾಡಲಾಗುವುದು. ನೆಗೆಟಿವ್ ವರದಿ ಬಂದ ನಂತರ ವಸತಿ ನಿಲಯಕ್ಕೆ ಪ್ರವೇಶ ಮಾಡಿಕೊಳ್ಳಲಾಗುವುದು. ವಿದ್ಯಾರ್ಥಿಗಳಿಗೆ ಶೀತ, ಕೆಮ್ಮು ಹಾಗೂ ಜ್ವರ ಕಂಡು ಬಂದರೆ ಚಿಕಿತ್ಸೆ ನೀಡಲು ಪ್ರತ್ಯೇಕ ಕೊಠಡಿ ಕಾಯ್ದಿರಿಸಲಾಗಿದೆ ಎಂದರು.

ಸಿಬ್ಬಂದಿಗಳಾದ ಜುಂಜಪ್ಪ, ವೀರಣ್ಣ ಮತ್ತಿಹಳ್ಳಿ, ಪ್ರೇಮಾವತಿ, ಶಿವಲೀಲಾ, ರಂಗಸ್ವಾಮಿ, ಆರೋಗ್ಯ ಇಲಾಖೆಯ ಖಲಂದರ್, ಇರ್ಫಾನ್ ಭಾಷಾ ಹಾಗೂ ಮತ್ತಿತರರು ಉಪಸ್ಥಿತರಿದ್ದರು.


13ನೇ ವರ್ಷದ ಪುಣ್ಯಸ್ಮರಣೆ



ವೇದಮೂರ್ತಿ ಶ್ರೀ ಚನ್ನಯ್ಯ ಒಡೆಯರ್
ಮಾಜಿ ಸಂಸದರು, ದಾವಣಗೆರೆ.

ನೀವು ನಮ್ಮನ್ನು ಅಗಲಿ ಇಂದಿಗೆ 13 ವರ್ಷಗಳಾದವು
ಸದಾ ನಿಮ್ಮ ಸ್ಮರಣೆಯಲ್ಲಿ....

- ಶ್ರೀಮತಿ ಹಾಲಮ್ಮ ಚನ್ನಯ್ಯ ಒಡೆಯರ್ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು.
- ಶ್ರೀಮತಿ ಹನುಮಮ್ಮ ನಾಗಯ್ಯ ಒಡೆಯರ್ ಮತ್ತು ಮಕ್ಕಳು ಹಾಗೂ ಅಳಿಯಂದಿರು, ಸೊಸೆಯಂದಿರು.
- ಶ್ರೀಮತಿ ಮಂಜುಳಾ ಶಿವಾನಂದಪ್ಪ, ಅಧ್ಯಕ್ಷರು, ತಾಲ್ಲೂಕು ಪಂಚಾಯ್ತಿ, ಜಗಳೂರು.



ಜನ್ಮದಿನದ ಶುಭಾಶಯಗಳು



ಜನ್ಮದಿನದ ಸಂಭ್ರಮದಲ್ಲಿರುವ
ಯುವ ಮುಖಂಡ,
ನಮ್ಮೆಲ್ಲರ ಆತ್ಮೀಯ ಮಿತ್ರ
ಶ್ರೀ ದರ್ಶನ್ ಚಿಂದಿಮಠ್
ಇವರಿಗೆ ಹಾರ್ದಿಕ
ಶುಭಾಶಯಗಳು.

- ವರುಣ್ ಎನ್.ಜಿ.
- ಕಿರಣ್ ಎನ್.ಜಿ.
- ಪವನ್ ಎಸ್. ರೇವಣಕರ್
- ಚೇತನ್ ಹೆಚ್.ಆರ್.
- ಅಮಿತ್
- ಸೂರ್ಯಪ್ರಕಾಶ್ ಎಂ.
- ಮನೋಹರ್ ದೇವಿಗೆರೆ
- ಸಮಂತ್ ಎಸ್. ದಾವಳಗಿ
- ಕಾರ್ತಿಕ್ ಜೆ.ಎಂ.
- ವಿಶಾಲ್ ಶೆಣೈ
- ಚಂದನ್ ಹೆಚ್.ವಿ.
- ಮಂಜುನಾಥ ಬಿ.ಎಸ್.
- ಬಸವರಾಜ್ ಹೆಚ್.ಎಸ್.
- ಕಾರ್ತಿಕ್ ಹೆಚ್.ಪಿ.
- ಮೋಹನ್ ಎನ್.ಬಿ.
- ಕಾಶೀನಾಥ್ ಜೆ.ಎಂ.

ದಾವಣಗೆರೆ ಗೆಳೆಯರ ಬಳಗ
ಐಶ್ವರ್ಯ ಜ್ಯೂಯಲರ್
ಎನ್.ಜಿ. ಅಂಡ್ ಫ್ಯಾಮಿಲಿ


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte